ಸಂಪುಟ : 8 ಸಂಚಿಕೆ : 281 ಪುಟ : 4 ಬೆಲೆ : 3.00 ಮಂಗಳವಾರ ಡಿಸೆಂಬರ್ 19, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 281 Pages : 4 Price : 3.00 Tuesday December 19, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ಸಾರ್ವಜನಿಕ ಅಹವಾಲು ಸ್ವೀಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ–ಸ್ಥಳದಲ್ಲೇ ಪರಿಹಾರ

# ವೈದ್ಯಕೀಯ ನೆರವು ಕೋರಿ ಬಂದವರಿಗೆ ಸಹಾಯ ಹಸ್ತ..!



**■ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಸೋಮವಾರದಂದು ನಗರದ ಕಾಟನ್ ಸೇಲ್ ಸೊಸೈಟಿಯಲ್ಲಿನ ತಮ್ಮ ಕಾರ್ಯಾಲಯದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಸಾರ್ವಜನಿಕರಿಂದ ಶಾಂತ ಚಿತ್ತದಿಂದಲೇ ಅಹವಾಲುಗಳನ್ನು ಸ್ವೀಕರಿಸಿದ ಅವರು, ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುವ ಶಿಷ್ಯ ವೇತನ, ವಸತಿ ಶಾಲೆ ಪ್ರವೇಶಾತಿ, ಆಶ್ರಯ ಮನೆ ಮಂಜೂರಾತಿ, ಸೇರಿದಂತೆ ವಿವಿಧ ಅಹವಾಲುಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಕೂಡಲೇ ಸಮಸ್ಯೆಗಳ ಪರಿಹಾರಕ್ಕಾಗಿ ಸೂಚನೆ ನೀಡಿದರು.

ಸ್ಥಳದಲ್ಲಿಯೇ ಪರಿಹಾರ: ಮಕ್ಕಳಿಗೆ ಹೃದಯ ಸಂಬಂಧಿ ಕಾಯಿಲೆಗೆ ಚಿಕಿತ್ಸೆ ಕೊಡಿಸಲು ಸಚಿವ ಎಚ್ ಕೆ ಪಾಟೀಲ ಅವರಲ್ಲಿ ಪೋಷಕರು ಸಹಾಯ ಹಸ್ತ ಚಾಚುತ್ತಿದ್ದಂತೆ, ಸಚಿವರು ಮಕ್ಕಳ ಆರೋಗ್ಯ ಸುಧಾರಣೆಗೆ ಹಾಗೂ ಉತ್ತಮ ಚಿಕಿತ್ಸೆ ದೊರಕಿಸಿಕೊಡುವ ಭರವಸೆ ನೀಡಿದರು.

> **ಸೌಲಭ್ಯ ವಿತರಣೆ**
>
> ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು, ತಾಲೂಕು ಪಂಚಾಯತ ವತಿಯಿಂದ ಗಣಕಯಂತ್ರ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಶ್ರವಣ ಸಾಧನಗಳನ್ನು ಫಲಾನುಭವಿಗಳಿಗೆ ವಿತರಿಸಿದರು.

ಹಾಗೂ ವೈದ್ಯರೊಂದಿಗೆ ತಕ್ಷಣ ಮಾತನಾಡಿ ಮಕ್ಕಳ ಚಿಕಿತ್ಸೆಗೆ ಅಗತ್ಯದ ಸಹಕಾರ, ಸಹಾಯ ಮಾಡಲಾಗುವುದು ಎಂದು ಪೋಷಕರಿಗೆ ಧೈರ್ಯ ತುಂಬಿದರು.

ಕೈಗಾರಿಕೆ ನಿವೇಶನ, ತುರ್ತು ಪಡಿತರ ಚೀಟಿ, ಸ್ವಯಂ ಉದ್ಯೋಗ ಹಾಗೂ ವಸತಿಗೆ ಸಂಬಂಧಿಸಿದ ಅಹವಾಲುಗಳಿಗೆ ಸಚಿವರು ಸ್ಥಳದಲ್ಲಿಯೇ ಪರಿಹಾರ ಒದಗಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಎಂ.ಗಂಗಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.









## ಇಂದಿನ ನೀರು ಪೂರೈಕೆ ವಿವರ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ದಿ. 19–12–2023ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ ಮೇಲಿನ ಭಾಗಗಳು ಮತ್ತು ಕೆಳಗಿನ ಭಾಗಗಳು, ವಾರ್ಡ್ ನಂ. 21, 22 ವಿಜಯನಗರ, ವಾಲ್ಮೀಕಿ ಭವನ, ಕುರುಗಲ್ಲ ಲೇಔಟ್, ಕಮತರ ಪ್ಲಾಟ್, ಶಿಗ್ಗಾವಿ ಪ್ಲಾಟ್, ಟವರ್ ಕಂಬ, ವಾರ್ಡ್ ನಂ. 30, 34 ಮೂರು ಶಿಳ್ಳಿನ ವಕಾರ, ವಡ್ಡರಗೇರಿ, ಕುಂಚಿ ಕೊರವರ ಓಣಿ, ಹೂಗಾರ ಪ್ಲಾಟ್ ಉಳಿದ ಕೆಲವು ಭಾಗಗಳು, ವಾರ್ಡ್ ನಂ. 29 ಸಾಯಿ ನಗರ, ಸಾಯಿನಾಥ ಮಂದಿರ ಲೈನ್, ಅಪಾರ್ಟ್ಮೆಂಟ್ ಹಿಂದಿನ ಭಾಗ, ಕಲಾಮಂದಿರ ರೋಡ್, ಪಂಚಾಕ್ಷರಿ ನಗರ, ವಾರ್ಡ್ ನಂ. 8, 9, 10 ಮಲ್ಲರಾಯನ ಕಟ್ಟೆ, ದೇವದಾರ ಓಣಿ, ಗಣಪತಿ ಗುಡಿ, ಕಬಾಡೆ ರೋಡ್, ಸಂಕಪ್ಪಜ್ಜನ ಮಠ, ಮಜ್ಜಿಗಿ ಓಣಿ, ಶಿರಹಟ್ಟಿ ಓಣಿ, ತೆಗ್ಗಿನ ಪೇಟೆ, ಪವಾರ್ ಓಣಿ, ಗದ್ದುಗೆ ಮಠದ ಸಂಧಿ, ಬೋರೇಗಾರ್ ಓಣಿ, ನೀಲಕಂಠ ಸ್ವಾಮಿ ಮಠ, ಹೆಲ್ತ್‌ಕ್ಯಾಂಪ್, ಅಶೋಕ ರೋಡ್, ಪೊಲೀಸ್ ಕ್ವಾರ್ಟರ್ಸ್. ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪತ್ರಿಕಾಗೋಷ್ಠಿಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ ಅಬ್ಬಿಗೇರಿ ಮಾಹಿತಿ

## ಡಿ. 20 ರಂದು ಅಯ್ಯಪ್ಪಸ್ವಾಮಿ ಶಕ್ತಿ ಪೂಜೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಪುತ್ರ ಕೆ.ಇ. ಕಾಂತೇಶ ಅವರ ಮುಂದಾಳತ್ವದಲ್ಲಿ ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಡಿ. 20ರಂದು ಅಯ್ಯಪ್ಪಸ್ವಾಮಿಯ ಶಕ್ತಿ ಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗದಗ–ಬೆಟಗೇರಿ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ ಅಬ್ಬಿಗೇರಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅನಿಲ ಅಬ್ಬಿಗೇರಿ, ಅವಳಿ ನಗರದಲ್ಲಿ ಇದೇ ಮೊದಲ ಬಾರಿಗೆ ಶ್ರದ್ಧಾ–ಭಕ್ತಿಯಿಂದ ಅಯ್ಯಪ್ಪಸ್ವಾಮಿ ಶಕ್ತಿ ಪೂಜೆ ಆಯೋಜಿಸಲಾಗಿದೆ. ಅಯ್ಯಪ್ಪಸ್ವಾಮಿ ಸನ್ನಿಧಿಯಲ್ಲಿ ಮಕರ ಜ್ಯೋತಿ ದರ್ಶನಕ್ಕೆ ತೆರಳುವ ಅಯ್ಯಪ್ಪ ಮಾಲಾಧಾರಿಗಳು, ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು ಎಂದು ತಿಳಿಸಿದರು.




ಡಿ. 20ರಂದು ಸಂಜೆ 6.50ಕ್ಕೆ ಕೇರಳದ ಅಯ್ಯಪ್ಪಸ್ವಾಮಿ ದೇವಸ್ಥಾನದ ತಂತ್ರಿಗಳಾದ ಶಿವಶಂಕರನ್ ಅವರಿಂದ ಪೂಜಾ ಕೈಂಕರ್ಯಗಳು ನೆರವೇರಲಿವೆ. ಅವಳಿ ನಗರದ 25ಕ್ಕೂ ಹೆಚ್ಚು ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಮಂತ್ರಣ ನೀಡಲಾಗಿದೆ. ಸಾರ್ವಜನಿಕರೂ ಸಹ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಪ್ರಸಾದ ಸ್ವೀಕರಿಸಬೇಕು ಎಂದು ವಿನಂತಿಸಿದರು.

ಸತತ 25 ವರ್ಷಗಳ ಕಾಲ ಅಯ್ಯಪ್ಪಸ್ವಾಮಿ ಯಾತ್ರೆ ಕೈಗೊಂಡ ಮಾಲಾಧಾರಿಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಸುಮಾರು 1 ಸಾವಿರಕ್ಕೂ ಹೆಚ್ಚು ಮಾಲಾಧಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆನಂದ ಗುರುಸ್ವಾಮಿಗಳು, ರಮೇಶ ಸಜ್ಜಗಾರ, ವೆಂಕಟೇಶ ಪೂಜಾರ, ಆನಂದಸ್ವಾಮಿ ಗುರುಸ್ವಾಮಿ, ಮಂಜುನಾಥ ಹಳ್ಳೂರಮಠ, ಸದಾನಂದ, ನಾಗರಾಜ ಮುಂತಾದವರು ಉಪಸ್ಥಿತರಿದ್ದರು.

### ಭ್ರಷ್ಟಾಚಾರದ ಪ್ರಕರಣಗಳಿದ್ದರೆ ಸುಮ್ಮನೆ ನೋಡುತ್ತಾ ಕುಳಿತುಕೊಳ್ಳುವುದಿಲ್ಲ: ಸಿಎಂ ಸಿದ್ದರಾಮಯ್ಯ


# ಕೊಟ್ಟ ಮಾತಿನಂತೆ ನಡೆದಿದ್ದೇವೆ

**■ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯದಲ್ಲಿ ಯಾವುದೇ ಭ್ರಷ್ಟಾಚಾರದ ಪ್ರಕರಣಗಳಿದ್ದರೆ ಅದನ್ನು ಸುಮ್ಮನೆ ನೋಡುತ್ತಾ ಕುಳಿತುಕೊಳ್ಳುವುದಿಲ್ಲ. ತನಿಖೆ ಮಾಡಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ರವಿವಾರ ಗದುಗಿನ ಬಾಲಕಿಯರ ಬಾಲಮಂದಿರ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಕ.ರ.ಸಾ. ನಿಗಮದಲ್ಲಿ ಸಾಕಷ್ಟು ಬಸ್ ಕೆಟ್ಟು ನಿಂತಿದ್ದು, ಚಾಲಕರಿಗೆ ಡ್ಯೂಟಿ ಸಿಗುತ್ತಿಲ್ಲ. ಡ್ಯೂಟಿ ಹಾಕಲು ಅಧಿಕಾರಿಗಳು ಹಣ ಕೇಳುತ್ತಾರೆ ಎಂದು ಚಾಲಕರೇ ಆರೋಪಿಸುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈಗಾಗಲೇ ನಾವು ಹಿಂದಿನ ಸರ್ಕಾರದ ಶೇ.40ರ ಭ್ರಷ್ಟಾಚಾರ ಪ್ರಕರಣವನ್ನು



ತನಿಖೆ ಮಾಡಿಸುತ್ತಿದ್ದೇವೆ. ಆರೋಪಗಳು ಸಾಬೀತಾದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಡ್ಯೂಟಿ ಹಾಕಲು ಲಂಚ ಕೇಳಿದ ಪ್ರಕರಣವನ್ನೂ ತನಿಖೆ ಮಾಡಿಸಲಾಗುವುದು ಎಂದರು.

ಕಾಂತರಾಜು ವರದಿಯ ಕುರಿತು ಮಾತನಾಡಿ, ವರದಿ ಇನ್ನೂ ಸಲ್ಲಿಸಿಲ್ಲವಾದ್ದರಿಂದ ಸ್ವೀಕಾರ ಮಾಡುವುದು ಹೇಗೆ? ವರದಿ ಕೊಟ್ಟ ಮೇಲೆ ಸ್ವೀಕಾರ ಮಾಡುವ ಪ್ರಶ್ನೆ ಉದ್ಭವವಾಗುತ್ತದೆ. ಶಾಶ್ವತ ಹಿಂದುಳಿದ ವರ್ಗಗಳ ಆಯೋಗವು ವರದಿ ಕೊಟ್ಟಿಲ್ಲ. ಕೊಡಲು ಬಂದಾಗ ವಿಚಾರ ಮಾಡುತ್ತೇವೆ. ವರದಿ ವೈಜ್ಞಾನಿಕವಲ್ಲ ಎಂದು ಕೆಲವರು ವಿಚಾರ ಮಾಡುತ್ತಿದ್ದು, ವರದಿ ಬರದೆ, ಏನಿದೆ ಎಂದು ತಿಳಿಯದೇ ಊಹಾಪೋಹದ ಮೇಲೆ ನಿರ್ಧಾರ ಮಾಡುತ್ತಿದ್ದಾರೆ. ವರದಿ ಬರಲಿ ನೋಡೋಣ ಎಂದರು.

▸▸ 3ನೇ ಪುಟಕ್ಕೆ

> **5ನೇ ಗ್ಯಾರಂಟಿ ಜನವರಿಯಲ್ಲಿ**
>
> ನವೆಂಬರ್ ಅಂತ್ಯದವರೆಗೆ ಹಿಂದಿನ ಸರ್ಕಾರ 70,814 ಕೋಟಿ ರೂ.ಗಳನ್ನು ಅಭಿವೃದ್ಧಿಗೆ ಖರ್ಚು ಮಾಡಿತ್ತು. ನಮ್ಮ ಸರ್ಕಾರ 73, 928 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಹಣವನ್ನು ಖರ್ಚು ಮಾಡಿಲ್ಲ ಎನ್ನುವುದು ಸುಳ್ಳು. 3000 ಕೋಟಿ ರೂ.ಗಳಷ್ಟು ಮೊತ್ತವನ್ನು ಹೆಚ್ಚು ವೆಚ್ಚ ಮಾಡಿದ್ದೇವೆ. ನಾವು ಸರ್ಕಾರ ರೂಪಿಸಿದ್ದು ಮೇ 20ಕ್ಕೆ, ಬಜೆಟ್ ಮಂಡಿಸಿದ್ದು ಜುಲೈನಲ್ಲಿ, ಅದು ಜಾರಿಯಾಗಿದ್ದು ಆಗಸ್ಟ್ 1ರಿಂದ. 4 ಗ್ಯಾರಂಟಿಗಳನ್ನು ಜಾರಿ ಮಾಡಿದ್ದು, 5ನೇ ಗ್ಯಾರಂಟಿ ಜನವರಿಯಲ್ಲಿ ಪ್ರಾರಂಭವಾಗಲಿದೆ. ಕೊಟ್ಟ ಮಾತಿನಂತೆ ನಡೆದಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

## ಬಾಲಕಿಯರ ಸರಕಾರಿ ಬಾಲಮಂದಿರ ಲೋಕಾರ್ಪಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಸಂಭಾಪುರ ರಸ್ತೆಯಲ್ಲಿ ಅಂದಾಜು 199 ಲಕ್ಷ ರೂ.ಗಳ ಅನುದಾನದಲ್ಲಿ ನಿರ್ಮಾಣಗೊಂಡ ಅತ್ಯಾಧುನಿಕ ಸೌಲಭ್ಯವುಳ್ಳ, ಸುಸಜ್ಜಿತ ಬಾಲಕಿಯರ ಸರಕಾರಿ ಬಾಲಮಂದಿರವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಭಾನುವಾರ ಲೋಕಾರ್ಪಣೆಗೊಳಿಸಿದರು.

ಈ ಸಂದರ್ಭದಲ್ಲಿ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ, ಶಾಸಕ ಜಿ.ಎಸ್. ಪಾಟೀಲ, ಮಾಜಿ ಸಚಿವ ಎಸ್.ಎಸ್. ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪಿ.ವಾಯ್. ಶೆಟ್ಟೆಪ್ಪನವರ, ಜಿಲ್ಲಾ ಮಕ್ಕಳ



ರಕ್ಷಣಾಧಿಕಾರಿ ರಾಧಾ ಮಣ್ಣೂರ ಸೇರಿದಂತೆ ಗಣ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು 1–4–2022ರ ಮಿಷನ್ ವಾತ್ಸಲ್ಯ ಎಂದು ಮರು ನಾಮಕರಣ ಮಾಡಿ ಯೋಜನೆಯನ್ನು ಜಾರಿಗೆ ತಂದಿದ್ದು, ಗದಗ ಜಿಲ್ಲೆಯಲ್ಲಿ ಮಕ್ಕಳ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಅನಾಥ, ನಿರ್ಗತಿಕ, ದೌರ್ಜನ್ಯ, ಹಿಂಸೆಗೆ ಒಳಪಟ್ಟ, ಪ್ರಕೃತಿ ವಿಕೋಪಗಳಿಗೆ ಒಳಗಾದ ಮಕ್ಕಳು, ಕೌಟುಂಬಿಕ ಕಲಹದಿಂದ ಬೇರ್ಪಟ್ಟ ಮಕ್ಕಳು, ನಿರ್ಲಕ್ಷ್ಯಕ್ಕೊಳಪಟ್ಟ ಮಕ್ಕಳು, ಖೈದಿ ಪಾಲಕರ ಮಕ್ಕಳು, ಭಿಕ್ಷಾಟನೆಯಿಂದ ರಕ್ಷಿಸಿದ ಮಕ್ಕಳು ಹಾಗೂ ಬಾಲ್ಯ ವಿವಾಹದಿಂದ ರಕ್ಷಿಸಿದ ಮಕ್ಕಳು ಹೀಗೆ ಇನ್ನಿತರೆ ಕಾರಣಾಂತರಗಳಿಂದ ಬಾಲಕಿಯರ ಸರಕಾರಿ ಬಾಲಮಂದಿರದಲ್ಲಿ ರಕ್ಷಣೆ ಮತ್ತು ಪೋಷಣೆಯನ್ನು ಪಡೆಯಬಹುದಾಗಿದೆ. ಈ ಬಾಲಕಿಯರ ಸರಕಾರಿ ಬಾಲಮಂದಿರವು 100 ಮಕ್ಕಳ ಸಾಮರ್ಥ್ಯವುಳ್ಳ ಕಟ್ಟಡವಾಗಿದ್ದು, ಈಗ ಗದಗನಲ್ಲಿ 43 ಮಕ್ಕಳು ರಕ್ಷಣೆ ಮತ್ತು ಪೋಷಣೆ ಪಡೆಯುತ್ತಿದ್ದಾರೆ.

## ಸಂಪಾದಕೀಯ

### ಇವರು ಶಿಕ್ಷಕರಾಗಿರಲು ಸಾಧ್ಯವೇ?

ಮಲದ ಗುಂಡಿಗೆ ಮಕ್ಕಳನ್ನು ಇಳಿಸಿ ಸ್ವಚ್ಛತೆಗೆ ಮುಂದಾದ ಘಟನೆ ರಾಜ್ಯಾದ್ಯಂತ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಕೋಲಾರ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದಿರುವ ಈ ಘಟನೆ ಶಿಕ್ಷಕ ಸಮುದಾಯ ಮಾತ್ರವಲ್ಲ, ಇಡೀ ರಾಜ್ಯ, ದೇಶ ತಲೆ ತಗ್ಗಿಸುವಂತಾಗಿದೆ.

ಮಕ್ಕಳು ಎಂದರೆ ದೇವರ ಸಮಾನ. ನಿಷ್ಕಲ್ಮಶ ಮನಸ್ಸಿನ ಪುಟ್ಟ ಪುಟ್ಟ ಮಕ್ಕಳನ್ನು ಮಲದ ಗುಂಡಿಗೆ ಇಳಿಸಿದವರು ಶಿಕ್ಷಕರಾಗಿರಲು ಸಾಧ್ಯವೇ ಇಲ್ಲ. ಮಕ್ಕಳಿಗೆ ಅಕ್ಷರ ಜ್ಞಾನ ಕೊಟ್ಟು, ಸರಿ ತಪ್ಪುಗಳ ಪ್ರಜ್ಞೆ ಬೆಳಸಿ, ದೇಶಕ್ಕೆ ಉತ್ತಮ ನಾಗರಿಕರನ್ನು ಕೊಡುವ ಮಹತ್ತರ ಜವಾಬ್ದಾರಿ ಹೊಂದಿರುವ ಶಿಕ್ಷಕರು ಈ ರೀತಿ ಮಾಡುತ್ತಾರೆ ಎಂದರೆ ಅವರು ಶಿಕ್ಷಕರಾಗಿರಲು ಸಾಧ್ಯವೇ ಇಲ್ಲ.

ಮಲದ ಗುಂಡಿಗೆ ಮಕ್ಕಳು ಮಾತ್ರವಲ್ಲ, ವಯಸ್ಕರು ಇಳಿಯಬಾರದು. ಯಂತ್ರೋಪಕರಣ ಬಳಸಿಯೇ ಅದನ್ನು ಸ್ವಚ್ಛ ಮಾಡಬೇಕು ಎನ್ನುವ ನಿಯಮವಿದೆ. ಅದನ್ನೂ ಮೀರಿ ಯಾರೇ ಮಲದ ಗುಂಡಿಗೆ ಇಳಿದರೂ ಅದಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಅಂಥ ಅನೇಕ ಉದಾಹರಣೆಗಳಿವೆ. ಇಂಥ ಒಂದು ಕನಿಷ್ಠ ಪ್ರಜ್ಞೆ ಇಲ್ಲದಂಥ ಶಿಕ್ಷಕರು, ತಮ್ಮ ಶಾಲೆಯ ಮಕ್ಕಳನ್ನೆ ಆ ಮಲದ ಗುಂಡಿಗೆ ಇಳಿಸಿದ್ದಾರೆ ಎಂದರೆ ಅದೆಂಥ ಹೀನ ಕೃತ್ಯ ಇರಬಹುದು ಎಂದು ಅಂದಾಜಿಸಬಹುದು.


ತಂದೆ-ತಾಯಿಯನ್ನು ಬಿಟ್ಟು ವಸತಿ ಶಾಲೆಯಲ್ಲಿ ಆಶ್ರಯ ಪಡೆದ ಮಕ್ಕಳಿಗೆ ಅಕ್ಷರಭ್ಯಾಸದ ಜೊತೆಗೆ ಪ್ರೀತಿಯೂ ಬೇಕು. ಶಿಕ್ಷಕರನ್ನೆ ಸರ್ವಸ್ವ ಎಂದು ಭಾವಿಸಿ ಮಕ್ಕಳು ಅಲ್ಲಿ ಆಶ್ರಯ ಪಡೆದಿರುತ್ತಾರೆ. ಬಡ ಪಾಲಕರು ಅಷ್ಟೆ. ಸರಕಾರ ಸಾಕಷ್ಟು ಸೌಲಭ್ಯ ಕೊಟ್ಟಿದೆ. ಶಿಕ್ಷಕರು ಜೊತೆಗಿದ್ದರು ಮಕ್ಕಳು ಉತ್ತಮ ಸಂಸ್ಕಾರ ಕಲಿಯುತ್ತಾರೆ. ವಸತಿ ಶಾಲೆಯಲ್ಲಿದ್ದರೆ ಉತ್ತಮ ಶಿಕ್ಷಣ ಸಿಗುತ್ತದೆ ಎಂದು ತಮ್ಮ ಕರುಳ ಕುಡಿಗಳನ್ನು ವಸತಿ ಶಾಲೆಗೆ ಸೇರಿಸಿರುತ್ತಾರೆ.

ಆದರೆ ಅವರ ಆಸೆ ಆಕಾಂಕ್ಷೆಗಳಿಗೆ ಕೋಲಾರ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಂಥ ಶಾಲೆಗಳು ನಿರಾಸೆ ತಂದುಕೊಡುತ್ತವೆ. ಇಂಥ ಒಂದು ಶಾಲೆಯ ಶಿಕ್ಷಕರು ಮಾಡುವ ಹೇಯ ಕೃತ್ಯಕ್ಕೆ ಇಡೀ ಶಿಕ್ಷಕ ಸಮುದಾಯ, ವಸತಿ ಶಿಕ್ಷಣ ಸಂಸ್ಥೆ ಟೀಕೆಗೆ ಗುರಿಯಾಗಬೇಕಾಗುತ್ತದೆ. ಅನುಮಾನದ ಕಣ್ಣಿಗೆ ಕಾರಣವಾಗುತ್ತದೆ.

ಲಕ್ಷ ಲಕ್ಷ ಸಂಬಳ ಪಡೆಯುವಂಥ ವಸತಿ ಶಾಲೆ ಶಿಕ್ಷಕರು ಮಾನವೀಯತೆ ಮೀರಿ ವರ್ತಿಸಿದ್ದಾರೆ. ಅದಕ್ಕೆ ಕ್ಷಮೆಯೇ ಇಲ್ಲ. ಕಾನೂನು ರೀತಿ ತಪ್ಪಿತಸ್ಥರು ಶಿಕ್ಷೆಗೆ ಒಳಗಾಗುತ್ತಾರೆ. ಅದರ ಜೊತೆಗೆ ನ್ಯಾಯಾಲಯ ಅವರಿಗೂ ಮಲದ ಗುಂಡಿಗೆ ಇಳಿದು ಸ್ವಚ್ಛಗೊಳಿಸುವ ಶಿಕ್ಷೆ ನೀಡಿದಾಗ ಮಾತ್ರ, ಮಕ್ಕಳು ಅನುಭವಿಸಿದ ಸಂಕಟ, ಅವಮಾನ ಆ ಶಿಕ್ಷಕರಿಗೂ ಅರ್ಥವಾಗುತ್ತದೆ. ಮಲದ ಗುಂಡಿಯಿಂದಾಗಿ ಅಂಥ ಶಿಕ್ಷಕರ ಮನಸ್ಸು ಅರಳುತ್ತದೆ.

### ಕಸ್ತೂರೆಮ್ಮ ಹಿರೇಮಠ್ ರಚಿಸಿದ ಕವನ ಸಂಕಲನ ವಿಮರ್ಶೆ

# ಬೆಂದು ಮೃದುವಾದ 'ನುಚ್ಚಿನ ಗಡಿಗಿ'




ರಾಷ್ಟ್ರಕವಿ ಕುವೆಂಪು ಹೇಳುವಂತೆ ಕನ್ನಡ ಭಾಷೆ ಎಂದರೆ ಮೈಮನ ಮರೆಯುವುದರ ಜೊತೆಗೆ ಕುಣಿಯುವಂತೆ ಮಾಡುವ ಭಾಷೆ. ಭಾಷೆಯ ಸೊಗಡು ಪ್ರತಿಯೊಬ್ಬರಲ್ಲಿ ಅಭಿಮಾನ ಮೂಡುವಂತೆ ಮಾಡುತ್ತದೆ. ಈ ಅಭಿಮಾನಕ್ಕೆ ಕನ್ನಡ ಭಾಷೆಯ ಸಾಹಿತ್ಯವನ್ನು ಉಳಿಸಲು ಬೆಳೆಸಲು ಹಲವಾರು ಜನ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿರುವ ಜನರು ಈ ಭಾಷೆಯನ್ನು ಪ್ರೀತಿಸುವಷ್ಟು ಯಾವ ಭಾಷೆಯನ್ನು ಪ್ರೀತಿಸಲಾರರು. ಬೇರೆ ಭಾಷೆಯ ಬಳಕೆ ಕಲಿಕೆ ಕೇವಲ ಹೊಟ್ಟೆಪಾಡಿಗಾಗಿ ಆದರೆ ಅಭಿಮಾನಕ್ಕಾಗಿ ಕನ್ನಡ ಭಾಷೆ.

ಇಂತಹ ಅಭಿಮಾನದಿಂದ ಹಲವಾರು ಪ್ರಕಾಶಕರು ಇವತ್ತಿಗೂ ಸಹ ಕನ್ನಡ ಸಾಹಿತ್ಯ ಸೇವೆಯನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಅವರಲ್ಲಿ ವಿಶೇಷವಾಗಿ ಕೋಟೆ ನಾಡು ಗಜೇಂದ್ರಗಡದ ದಿವಂಗತ ಡಾ. ಈಶ್ವರಪ್ಪ ರೇವಡಿ ಅವರಿಂದ ಸ್ಥಾಪನೆಗೊಂಡ ಬಸವ ಪ್ರಕಾಶನ. ಈ ಪ್ರಕಾಶನದ ಮೂಲಕ ಪ್ರಕಟಣೆಗೊಂಡ ಪ್ರಮುಖ ಗ್ರಂಥಗಳೆಂದರೆ ಬೆಟ್ಟದ ಬೇರು, ಬೇಲಿಯಿಂದ ಬಾನಿಗೆ, ಹಿಂಗಂದ್ರೇನು, ಚಿರ ಚೇತನ, ನುಚ್ಚಿನ ಗಡಿಗಿ, ಭುವನೇಶ್ವರಿಯ ತೇರ ಎಳೆದವರು ಇನ್ನೂ ಮುಂತಾದವು. ಇದರಲ್ಲಿ 'ನುಚ್ಚಿನ ಗಡಗಿ' ಕವನ ಸಂಕಲನ ಪ್ರಮುಖವಾದದ್ದು.

ಶ್ರೀಮತಿ ಕಸ್ತೂರೆಮ್ಮ ಹಿರೇಮಠ್ ರಚಿಸಿದ ಈ ಗ್ರಂಥವು ಸುಂದರವಾಗಿ ಮೂಡಿಬಂದಿದೆ. ವೃತ್ತಿಯಿಂದ ಶಿಕ್ಷಕಿಯರಾದ ಇವರು ತಮ್ಮ ಜೀವನದಲ್ಲಿ ತಾವು ಕಂಡ ಹಲವಾರು ಘಟನೆಗಳನ್ನು ಆಧರಿಸಿ ಕವನಗಳನ್ನು ರಚಿಸಿದ್ದಾರೆ. ಕವನ ಸಂಕಲನದಲ್ಲಿ ತಾಯಿ-ಮಗಳ ಅಣ್ಣ- ತಂಗಿಯ ಅಪ್ಪ -ಮಗಳ ಅಣ್ಣ -ತಮ್ಮರ ಬಾಂದವ್ಯದ ಬಗ್ಗೆ, ಭಕ್ತಿ, ನಂಬಿಕೆ, ಗೌರವ, ದೇಶ ಇನ್ನೂ ಮುಂತಾದ ವಿಷಯಗಳ ಮೇಲೆ ಕವನಗಳು ರಚನೆಗೊಂಡಿದ್ದು ಸರಳ ಸುಲಭ ಸಾಮಾನ್ಯರಿಗೂ ಅರ್ಥವಾಗುವ ಸಾಹಿತ್ಯ ರಚನೆ ಇವರದ್ದು.

ಗ್ರಾಮೀಣ ಪ್ರದೇಶದ ಸೊಗಡು ಕವನಗಳಲ್ಲಿ ಹೆಚ್ಚಾಗಿ ಹಾಸುಹೊಕ್ಕಾಗಿ ಮೂಡಿಬಂದಿದೆ. ಸಾಹಿತಿಯಾದವನು ಜೀವನ ಸಾಗರದಲ್ಲಿ ಎಲ್ಲ ಕಷ್ಟ ಸಂಕಷ್ಟಗಳನ್ನು ಅನುಭವಿಸಿದಾಗ ಆ ನೋವು ನಲಿವುಗಳೇ ಮುಂದೆ ಕಥೆ ಕಾದಂಬರಿ ಕವನವಾಗಿ ಹೊರಬರಲಿಕ್ಕೆ ಸಾಧ್ಯ ಎಂಬುದು ಬೇಂದ್ರೆಯವರ ಅಭಿಪ್ರಾಯದಂತೆ ಕವಯಿತ್ರಿ ತಮ್ಮ ಜೀವನದಲ್ಲಿ ಅನುಭವಿಸಿದ ನೋವು-ಸಂಕಷ್ಟಗಳು ಪದ ರೂಪ ಪಡೆದುಕೊಂಡು ಕವನವಾಗಿದೆ.

ಕವನ ಸಂಕಲನವು ಶೀರ್ಷಿಕೆಗೆ ತಕ್ಕಂತೆ ನುಚ್ಚು ಗಡಿಗೆಯಲ್ಲಿ ಬಿದ್ದು ಬೆಂದು, ಮೆದುವಾಗುವಂತೆ ಕವನಗಳಿವೆ. ತಾಯಿಯು ಮಗಳಿಗೆ ಗಂಡನ ಮನೆಗೆ ಹೋಗುವಾಗ ಹೇಳುವಂತ ಬುದ್ಧಿವಾದ ಮಾತುಗಳು ಕವನವಾಗಿ ಹೊರಬಂದಿದೆ. ಈ ಕವನ ಒಂದು ರೀತಿಯಲ್ಲಿ ಜನಪದ ಗೀತೆಯ ಶೈಲಿಯಲ್ಲಿ ಮೂಡಿಬಂದಿದ್ದರೂ ಸಹ ಇವತ್ತಿನ ದಿನಮಾನಕ್ಕೆ, ಯುವ ಪೀಳಿಗೆಗೆ ದಾರಿದೀಪವಾಗುವುದರಲ್ಲಿ ಸಂಶಯವಿಲ್ಲ.

ಗಾದೆ ಮಾತುಗಳ ಕುರಿತಾದ ಕವನಗಳು ಕಾಮಧೇನು ಕಲ್ಪವೃಕ್ಷವಾಗಿರುವ ಗೋವುಗಳ ರಕ್ಷಣೆ ಇತ್ತೀಚಿಗೆ ಜಗತ್ತನ್ನೇ ತಲ್ಲಣಗೊಳಿಸಿದ ಮಾರಕ ಕಾಯಿಲೆ ಕರೋನದ ಬಗ್ಗೆ ಕವನಗಳಿವೆ. ಹೆಣ್ಣು ಮಕ್ಕಳನ್ನು ಜರಿಯಬೇಡಿರಿ, ಇವತ್ತಿನ ಕಾಲದಲ್ಲಿ ಪತ್ರಿಕೆಗಳಲ್ಲಿ ನಾವು ಕೇಳುವ, ನೋಡುವ ಹೆಣ್ಣು ಭ್ರೂಣ ಹತ್ಯೆಗಳು ಸಮಾಜದ ಮಾನಸಿಕ ಭಾವನಾತ್ಮಕ ದೌರ್ಬಲ್ಯಗಳನ್ನು ಖಂಡಿಸಬೇಕಾಗಿದೆ. ಅದನ್ನು ಕವಯಿತ್ರಿಯವರು ಕವನದ ಮೂಲಕ ಸಮಾಜಕ್ಕೆ ಚಾಟಿ ಬೀಸಿದ್ದಾರೆ.

ಮಾನವನು ಸ್ವಾರ್ಥಿಯಾಗಿದ್ದು ಅವನು ಇಂದಿನ ದಿನಮಾನದಲ್ಲಿ ತನ್ನ ಸುತ್ತಮುತ್ತಲಿನ ಪರಿಸರದ ಮೇಲೆ ನಿರಂತರ ದಾಳಿ ನಡೆಸುತ್ತಿದ್ದಾನೆ. ಇದರಿಂದ ಅರಣ್ಯ ನಾಶವಾಗುವುದರ ಜೊತೆ-ಗೆ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಅವುಗಳನ್ನು ಉಳಿಸಿ-ಬೆಳೆಸುವಂತಹ ಕಾರ್ಯ ಸರ್ವಜನಾಂಗದಿಂದ ಆಗಬೇಕಾಗಿದೆ.

ಮಣ್ಣಿನ ಮೇಲೊಂದು। ಮರವಾಗಿ ಹುಟ್ಟಿದರೆ ಮಾನವನಿಗಿಂತ ಮೇಲಂತೆ।

ಶಿವ ಶಿವ ನೆರಳಾಗತೀನಿ ಮರವಾಗಿಸಯ್ಯ।

ಕವನವು 'ಪರೋಪಕಾರಂ ಇದಂ ಶರೀರಂ' ಮಾನವನಾಗಿ ಹುಟ್ಟುವುದಕ್ಕಿಂತ ಮರವಾಗಿ ಹುಟ್ಟಿದರೆ ನಾಲ್ಕು ಜನಕ್ಕೆ ನೆರಳಾಗಿ ಹಣ್ಣು-ಹಂಪಲ ನೀಡಿ ಫಲವಾಗಿ ಪ್ರಾಣಿ-ಪಕ್ಷಿಗಳಿಗೆ ಆಶ್ರಯವಾಗಿ ನಿಲ್ತೀವಿ. ಆದರೆ ಮಾನವನಾಗಿ ಮರವನ್ನೇ ಕಡಿಯುವ ಸ್ವಾರ್ಥ ಮಾನವ ಜನ್ಮ ಬೇಡವೆಂದು ಕವಯಿತ್ರಿ ಸಮಾಜಕ್ಕೆ ಬುದ್ಧಿವಾದ ಹೇಳುವಂತ ಪರಿ ಅದ್ಭುತ.

ಒಟ್ಟಿನಲ್ಲಿ, ಕವನ ಸಂಕಲನದಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಮಾನವ ವೈಯಕ್ತಿಕ ಬದುಕಿನ ಎಲ್ಲ ವಿಷಯಗಳನ್ನು ಒಳಗೊಂಡು ರಚಿತವಾದ ಗ್ರಂಥವಾಗಿದ್ದು 'ಬರೆದು ಬರೆದು ಬೃಹತ್ ಗ್ರಂಥವಾಯಿತು' ಎನ್ನುವಂತೆ ಕಸ್ತೂರೆಮ್ಮ ಹಿರೇಮಠರು ಇನ್ನಷ್ಟು ಸಾಹಿತ್ಯ ಕೃಷಿಯನ್ನು ಮಾಡುತ್ತ ಸಾಗಲಿ. ಅವರಿಂದ ಒಳ್ಳೆಯ ಕವನ ಸಂಕಲನಗಳು ಮತ್ತು ಇತರ ಸಾಹಿತ್ಯದ ಎಲ್ಲ ಪ್ರಕಾರದ ಗ್ರಂಥಗಳನ್ನು ಹೊರತರುವಂತಾಗಲಿ. ಅವರ ಕನ್ನಡ ಭುವನೇಶ್ವರಿಯ ಸೇವೆ ನಿರಂತರ ಸಾಗಲಿ. ಸಿರಿಗನ್ನಡಂ ಗೆಲ್ಗೆ...

**ವಿಮರ್ಶೆ: ಹನಮಂತ ಭಜಂತ್ರಿ. ಗಜೇಂದ್ರಗಡ.**

# ದೊರೆತ ಅವಕಾಶವನ್ನು ಬಳಸಿಕೊಳ್ಳಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಗ್ರಾಮೀಣ ಭಾಗದ ವಿದ್ಯಾಥಿಗಳಲ್ಲಿ ಆಗಾಧ ಪ್ರತಿಭೆ ಅಡಗಿರುತ್ತದೆ. ಶಾಲಾ-ಕಾಲೇಜು ಹಂತದಲ್ಲಿಯೇ ವಿದ್ಯಾರ್ಥಿಗಳಲ್ಲಿನ ಪ್ರತಿಭೆ, ಕೌಶಲ್ಯ, ಸೃಜನಾತ್ಮಕತೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ಶಿಕ್ಷಕರು ಹಾಗೂ ಸಮುದಾಯ ಮಾಡಬೇಕು ಎಂದು ಲಕ್ಷ್ಮೇಶ್ವರ ತಾಲೂಕು ಕಸಾಪ ಅಧ್ಯಕ್ಷ ಈಶ್ವರ ಮೆಡ್ಲೇರಿ ಹೇಳಿದರು.

ಪಟ್ಟಣದ ಶ್ರೀಮತಿ ಕಮಲಾ ವೆಂಕಪ್ಪ ಶ್ರೀ ವೆಂಕಪ್ಪ ಅಗಡಿ ಪಪೂ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ 'ಬಾಹ್ಯಾಕಾಶದತ್ತ ಭಾರತ-2023' ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಭಾರತವು ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಬಾಹ್ಯಾಕಾಶ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯಲ್ಲಿ ಜಗತ್ತಿನ ಹಲವು ದೇಶಗಳು ಕೊಂಡಾಡುತ್ತಿವೆ.

ವಿದ್ಯಾರ್ಥಿಗಳು ತಮಗೆ ದೊರೆತಿರುವ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡು ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡುವ ಕಾರ್ಯ ಮಾಡಬೇಕು. ವಿಜ್ಞಾನದ ವಿದ್ಯಾರ್ಥಿಗಳೂ ಸಹ ಕನ್ನಡ ಭಾಷೆ, ಸಾಹಿತ್ಯ, ನೆಲ, ಜಲ, ಸಂಸ್ಕೃತಿಯ ಬಗ್ಗೆ ಅಭಿಮಾನ ಸ್ವಾಭಿಮಾನ ಹೊಂದಿರಬೇಕು ಎಂದರು.

ಪ್ರಬಂಧ ಸ್ಪರ್ಧೆಯಲ್ಲಿ ಸೆವೆಂಥ್ ಡೇ ಶಾಲೆಯ ವಿದ್ಯಾರ್ಥಿ ಅರುಣ ಪೌಲ್ (ಪ್ರಥಮ), ಆಕ್ಸಫರ್ಡ್ ಶಾಲೆಯ ಸುಪ್ರೀತಾ ವಡಕಣ್ಣವರ (ದ್ವಿತೀಯ) ಹಾಗೂ ತೃತೀಯ ಸ್ಥಾನ ಪಡೆದ ತಾಯಿ ಪಾರ್ವತಿ ಮಕ್ಕಳ ಬಳಗದ ಮಧುಮತಿ ಉಳ್ಳಟ್ಟಿ ಅವರಿಗೆ ಪ್ರಾಚಾರ್ಯ ಡಾ. ಎನ್. ಹಯವದನ ಬಹುಮಾನ, ಪ್ರಶಸ್ತಿಪತ್ರ ವಿತರಿಸಿದರು.

ಈ ಸಂದರ್ಭದಲ್ಲಿ ಎನ್. ಎಚ್. ಕಾಳೆ, ರಾಕೇಶ ಕುಲಕರ್ಣಿ, ಪ್ರವೀಣ ಮಳ್ಳಿ, ಸುನೀಲ ಪಾಟೀಲ, ಗಂಗಾಧರ ನುಚ್ಚಂಬಲಿ, ಅಲ್ತಾಫ್ ಗುಳಗುಂದಿ, ವೇದಾ ವಸ್ತ್ರದ ಇದ್ದರು. ಸಿ.ಎಸ್. ಹಿರೇಮಠ, ಸುಧಾರಾಣಿ ಮಾಲಿಪಾಟೀಲ, ಪ್ರವೀಣಕುಮಾರ ಮಳಲಿ ನಿರೂಪಿಸಿದರು.

### ಪವಾಡ ಆಂಜನೇಯ ದೇವಸ್ಥಾನದ ಕಾರ್ಯಕ್ರಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಗುರುವಿನ ಮಾರ್ಗದರ್ಶನದಲ್ಲಿ ಉನ್ನತಿ ಸಾಧ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಧರ್ಮವನ್ನು ಸಮಾಜದ ಅಭ್ಯುದಯಕ್ಕಾಗಿ ಬಳಸಬೇಕಲ್ಲದೇ ವಿನಾಶಕ್ಕಾಗಿ ಅಲ್ಲ. ವಿದ್ಯೆ, ಸಂಪತ್ತನ್ನು ಗಳಿಸುವಾಗ ಬಹಳ ದಿನ ಬದುಕಿರುತ್ತೇವೆಂಬ ವಿಶ್ವಾಸವಿರಬೇಕು. ಆದರೆ ಧರ್ಮದ ವಿಚಾರ ಬಂದಾಗ ಯಾವ ಘಳಿಗೆಯಲ್ಲಿ ಮೃತ್ಯು ಬಂದು ಎಳೆದೊಯ್ಯುವುದೋ ಎಂಬ ಭಯ ಹೊಂದಿ ಧರ್ಮ ಕಾರ್ಯಗಳನ್ನು ಬೇಗ ಬೇಗನೇ ಮುಗಿಸಬೇಕು ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ನಗರದ ವೀರಸೋಮೇಶ್ವರ ನಗರದ ಪವಾಡ ಆಂಜನೇಯ ದೇವಸ್ಥಾನದ ಮಹಾದ್ವಾರ ಮತ್ತು ದೀಪಸ್ತಂಭ ಉದ್ಘಾಟನೆ ಹಾಗೂ 5ನೇ ವರ್ಷದ ಕಾರ್ತಿಕೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ನಾವು ನಿಂತ ನೆಲ, ಕುಡಿಯುವ ನೀರು, ಉಸಿರಾಡುವ ಗಾಳಿ ಇವು ಎಲ್ಲ ಆ ಭಗವಂತ ಕೊಟ್ಟ ವರ. ಈ ಅಮೂಲ್ಯ ಸಂಪತ್ತನ್ನು ದೇವರು ಕರುಣಿಸದಿದ್ದರೆ ನಾವು ಬಾಳಲು ಸಾಧ್ಯವಿರುತ್ತಿರಲಿಲ್ಲ. ಮನುಷ್ಯ ನಿಜವಾದ ಧರ್ಮಾಚರಣೆಯಿಂದ ವಿಮುಖಗೊಂಡರೆ ಆತಂಕ ತಪ್ಪಿದ್ದಲ್ಲ. ದೇವರನ್ನು ಯಾವ ಹೆಸರಿನಿಂದ ಕರೆದರೂ ಓಗೊಡುತ್ತಾನೆ. ಇದನ್ನರಿಯದೇ ಇಂದು ದೇವರು-ಧರ್ಮದ ಹೆಸರಿನಲ್ಲಿ ಸಂಘರ್ಷ ನಡೆಯುತ್ತಿರುವುದು ಒಳ್ಳೆಯದಲ್ಲ. ಬುದ್ಧಿ ಬೆಳೆದಷ್ಟು ಭಾವನೆ ಬೆಳೆಯುತ್ತಿಲ್ಲವಾದ ಕಾರಣ ಮನುಷ್ಯ ಸಂಘರ್ಷಕ್ಕೆ ಇಳಿಯುತ್ತಿದ್ದಾನೆ. ಯೋಗ್ಯ ಗುರುವಿನ ಮಾರ್ಗದರ್ಶನದಲ್ಲಿ ಒಳ್ಳೆಯ ಗುರಿಯೊಂದಿಗೆ ಮುನ್ನಡೆದರೆ ಜೀವನದಲ್ಲಿ ಉನ್ನತಿ ಕಾಣಲು ಸಾಧ್ಯ ಎಂದರು.



ಮಾನವ ಧರ್ಮಕ್ಕೆ ಜಯವಾಗಲಿ-ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ದಿವ್ಯ ಸಂದೇಶ ನೀಡಿದ ಶ್ರೀ ರಂಭಾಪುರಿ ವೀರಗಂಗಾಧರ ಜಗದ್ಗುರುಗಳ ಮಾರ್ಗದರ್ಶನದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರ ನಿರ್ಮಾಣಕ್ಕಾಗಿ ಮಾಜಿ ಸಚಿವರಾದ ದಿವಂಗತ ಕೆ.ಎಚ್. ಪಾಟೀಲರು ನಿವೇಶನ ದೊರಕಿಸಿಕೊಟ್ಟಿದ್ದನ್ನು ಮರೆಯಲಾಗದು. ಮಾಂಗಲ್ಯ ಮಂದಿರ ನಿರ್ಮಾಣಕ್ಕಾಗಿ ಡಿ.ಆರ್. ಪಾಟೀಲ, ಹೆಚ್.ಕೆ. ಪಾಟೀಲ, ಬಸಣ್ಣ ಮಲ್ಲಾಡದ ಸೇರಿದಂತೆ ಗದಗ ನಗರದ ಸಮಸ್ತ ಭಕ್ತರು ಸಹಕರಿಸಿದ್ದು ಸದಾ ಸ್ಮರಣೀಯವಾಗಿದೆ. ಗದಗ ನಗರದ ಮುಖ್ಯ ವೃತ್ತ ಒಂದಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯ ವೃತ್ತ ಎಂದು ನಾಮಕರಣ ಮಾಡುವಲ್ಲಿ ಪೀಠಾಭಿಮಾನಿಗಳು ಗಮನಿಸಬೇಕು ಎಂದು ಶ್ರೀಗಳು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಬಂಕಾಪುರದ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು, ನರೇಗಲ್ಲ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಬನ್ನಿಕೊಪ್ಪದ ಡಾ. ಸುಜ್ಞಾನದೇವ ಶಿವಾಚಾರ್ಯ ಸ್ವಾಮಿಗಳು ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಡಿ.ಆರ್. ಪಾಟೀಲ, ದೇವಸ್ಥಾನ ಕಮೀಟಿಯ ಅಧ್ಯಕ್ಷ ಶಿವಾನಂದಯ್ಯ ಹಿರೇಮಠ, ಮೃತ್ಯುಂಜಯ ಸಂಕೇಶ್ವರ ಭಾಗವಹಿಸಿದ್ದರು. ಚಂದ್ರು ಬಾಳಿಹಳ್ಳಿಮಠ ಪ್ರಾಸ್ತಾವಿಕವಾಗಿ ಮಾತನಾಡಿ ಪವಾಡ ಆಂಜನೇಯಸ್ವಾಮಿ ದೇವಸ್ಥಾನ ಬೆಳೆದು ಬಂದ ಬಗ್ಗೆ ಮತ್ತು ಸಾಮಾಜಿಕ ಕಾರ್ಯ ಚಟುವಟಿಕೆಗಳ ಕುರಿತು ವಿವರಿಸಿದರು.

ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳನ್ನು ವೈಭವದ ಸಾರೋಟ ಉತ್ಸವದ ಮೂಲಕ ಬರಮಾಡಿಕೊಳ್ಳಲಾಯಿತು. ವಿವಿಧ ವಾದ್ಯ ಮೇಳಗಳು, ಕುಂಭ ಹೊತ್ತ ಮಹಿಳೆಯರು ಆರತಿ ಹಿಡಿದ ಸುಮಂಗಲೆಯರು ಹಾಗೂ ಸಹಸ್ರಾರು ಜನತೆ ಪಾಲ್ಗೊಂಡಿದ್ದರು.

# ಧೂಮಪಾನ ಅಡ್ಡೆಗಳ ಮೇಲೆ ದಾಳಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಯಂತ್ರಣಕ್ಕಾಗಿ ನಿರಂತರ ದಾಳಿ ನಡೆಸುತ್ತಿರುವ ಜಿಲ್ಲಾ ತಂಬಾಕು ನಿಯಂತ್ರಣ ತನಿಖಾದಳದ ಅಧಿಕಾರಿಗಳು, ಸೋಮವಾರ ನಗರದ ಚೆನ್ನಮ್ಮ ಸರ್ಕಲ್ ಬಳಿ ಹಾಗೂ ಕಳಸಾಪೂರ ರಸ್ತೆಯಲ್ಲಿರುವ ತಂಬಾಕು ಮಾರಾಟ ಮಾಡುವ ಅಂಗಡಿಗಳ ಮೇಲೆ ದಾಳಿ ಮಾಡಿದರು.




ಚೆನ್ನಮ್ಮ ಸರ್ಕಲ್ ಹಾಗೂ ಕಳಸಾಪೂರ ರಸ್ತೆಯಲ್ಲಿರುವ ಧೂಮಪಾನ ಮಾಡುವ ಅಡ್ಡೆಗಳಾದ ಪಾನ್ ಶಾಪ್, ಟೀ ಅಂಗಡಿಗಳ ಮೇಲೆ ದಾಳಿ ಮಾಡಿ ತಂಬಾಕಿನಿಂದ ಉಂಟಾಗುವ ಹಾನಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಅಷ್ಟೇ ಅಲ್ಲದೇ ಸುಮಾರು 17 ಪ್ರಕರಣ ದಾಖಲಿಸಿ ರೂ. 2800/- ದಂಡ ಸಂಗ್ರಹಿಸಲಾಯಿತು.

ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ್ ರಾಥೋಡ್ ಅವರ ಮಾರ್ಗದರ್ಶನದಲ್ಲಿ ನಡೆದ ದಾಳಿಯಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಜಿಲ್ಲಾ ಸಲಹೆಗಾರ ಗೋಪಾಲ ಸುರಪುರ, ಡಬ್ಲ್ಯೂ.ಪಿ.ಎಸ್.ಐ. ಬಿ.ಆರ್. ಬಂಕಾಪೂರ, ಪೇದೆ ಎ.ಆರ್.ಪಾಟೀಲ, ಆರೋಗ್ಯ ಇಲಾಖೆಯ ವೈ.ಎನ್. ಕಡೆಮನಿ ಸೇರಿದಂತೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

## ಡ್ರಗ್ಸ್ ಕುರಿತು ಬೃಹತ್ ಜಾಗೃತಿ ಅಭಿಯಾನ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದಲ್ಲಿ ಡ್ರಗ್ಸ್ ವಿರುದ್ಧದ ಕ್ರಮವನ್ನು ಮತ್ತಷ್ಟು ಹೆಚ್ಚಿಸಲು ಕರ್ನಾಟಕ ಪೊಲೀಸ್ ಮಹಾನಿರ್ದೇಶಕರು, ಡ್ರಗ್ಸ್ ಬಳಕೆ ಮತ್ತು ದುಷ್ಪರಿಣಾಮಗಳ ವಿರುದ್ಧ ಬೃಹತ್ ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ನಡೆಸುವಂತೆ ಎಲ್ಲಾ ಪೊಲೀಸ್ ಆಯುಕ್ತರು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. "ಪೊಲೀಸ್ ಸಬ್-ಇನ್ಸ್‌ಪೆಕ್ಟರ್(ಪಿಎಸ್‌ಐ) ಶ್ರೇಣಿಯಿಂದ ಪೊಲೀಸ್ ವರಿಷ್ಠಾಧಿಕಾರಿ/ಪೊಲೀಸ್ ಉಪ ಆಯುಕ್ತ(ಎಸ್‌ಪಿ/ಡಿಸಿಪಿ) ಶ್ರೇಣಿಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಕಾಲೇಜುಗಳು ಮತ್ತು ಶಾಲೆಗಳಿಗೆ ಡಿಸೆಂಬರ್ 20 ರಂದು ಭೇಟಿ ನೀಡಿ ಜಾಗೃತಿ ಕಾರ್ಯಕ್ರಮ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಕೆ.ಸಿ.ಸಿ. ಬ್ಯಾಂಕ್‌ನ ನೂತನ ಶಾಖೆ ಸ್ಥಾಪನೆಗೆ ಅನುಮತಿ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಭಾರತೀಯ ರಿಸರ್ವ್ ಬ್ಯಾಂಕ್ ಡಂಬಳ ಗ್ರಾಮದಲ್ಲಿ ಕೆ.ಸಿ.ಸಿ. ಬ್ಯಾಂಕಿನ ನೂತನ ಶಾಖೆ ಸ್ಥಾಪನೆ ಮಾಡಲು ಅನುಮತಿ ನೀಡಿದ್ದು, ಈ ಹಿನ್ನೆಲೆಯಲ್ಲಿ ಡಂಬಳ ಹೋಬಳಿ ವ್ಯಾಪ್ತಿಯ ಪ್ರತಿಯೊಂದು ಗ್ರಾಮಗಳ ಸಾರ್ವಜನಿಕರ ಸಹಕಾರ ಮಹತ್ವದಾಗಿದೆ. ಪ್ರತಿಯೊಂದು ಗ್ರಾಮಕ್ಕೂ ನಮ್ಮ ಸಂಸ್ಥೆಯ ಮೂಲಕ ಕರಪತ್ರ ನೀಡಲಾಗುವುದು. ಬ್ಯಾಂಕ ಸ್ಥಾಪನೆಗೆ ಗ್ರಾಹಕರೇ ಆಸ್ತಿಯಾಗಿದ್ದಾರೆ ಎಂದು ಮುಂಡರಗಿ ಶಾಖೆಯ ಕರ್ನಾಟಕ ಸೆಂಟ್ರಲ್ ಕೋ-ಆಪ್ ಬ್ಯಾಂಕ್ ನಿರೀಕ್ಷಕ ಕೆ.ಬಿ. ದೊಡ್ಡಮನಿ ಹೇಳಿದರು.

ಈ ಕುರಿತು ಡಿ.20ರಂದು ಮುಂಜಾನೆ 11.30ಕ್ಕೆ ತೋಂಟ-ದಾರ್ಯ ಕಲಾಭವನದಲ್ಲಿ ಧಾರವಾಡ ಕೆ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಶಿವಕುಮಾರಗೌಡ ಎಸ್.ಪಾಟೀಲ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ. ರಾಷ್ಟ್ರೀಕೃತ ಬ್ಯಾಂಕಗಿಂತ ಕಡಿಮೆ ಬಡ್ಡಿದರದಲ್ಲಿ ಕೆ.ಸಿ.ಸಿ. ಬ್ಯಾಂಕ್ ಗ್ರಾಹಕರಿಗೆ ಸಾಲ ನೀಡಲಿದೆ. ಬ್ಯಾಂಕ್ ಸ್ಥಾಪನೆಗೆ ಕನಿಷ್ಠ 5 ಕೋಟಿ ರೂ. ಹಣ ಠೇವಣ ಇಡಬೇಕಾದ ನಿಯಮವಿದ್ದು ಸಾರ್ವಜನಿಕರು ಅಗತ್ಯ ಸಹಾಯ-ಸಹಕಾರ ನೀಡಲು ಮುಂದಾಗಬೇಕೆಂದು ಕೋರಿದರು.

ಮುಂಡರಗಿ ಕೆ.ಸಿ.ಸಿ ಬ್ಯಾಂಕ್ ಮ್ಯಾನೇಜರ್ ಎಸ್.ಬಿ. ಕೂಗು ಮಾತನಾಡಿ, ನಮ್ಮ ಬ್ಯಾಂಕ್ ವತಿಯಿಂದ ವಿವಿಧ ಸಾಲ ಸೌಲಭ್ಯವನ್ನು ಗ್ರಾಹಕರಿಗೆ ನೀಡಲಾಗುತ್ತದೆ. ಆರ್.ಟಿ.ಜಿ.ಎಸ್. ನೆಫ್ಟ್, ಮೊಬೈಲ್ ಬ್ಯಾಂಕಿಂಗ್ ಸೌಲಭ್ಯಗಳಿದ್ದು ಠೇವಣಿಗೆ ಗ್ರಾಹಕರಿಗೆ ಆಕರ್ಷಕ ಬಡ್ಡಿದರ ಹಾಗೂ ವಿವಿಧ ಯೋಜನೆಯಡಿ ಸಾಲ ಸೌಲಭ್ಯಗಳು ಲಭ್ಯವಿರುತ್ತವೆ ಎಂದರು.

ಸಭೆಯಲ್ಲಿ ಡಂಬಳ ಹೋಬಳಿ ಭಾಗದ ಬ್ಯಾಂಕ್ ನಿರೀಕ್ಷಕ ಮಹಾಂತೇಶ ಸುರಕೊಡ, ಡಂಬಳ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸುರೇಶ ಗಡಗಿ, ಉಪಾಧ್ಯಕ್ಷ ಮರಿಯಪ್ಪ ಸಿದ್ದಣ್ಣವರ, ಮುಖಂಡರಾದ ವಿ.ಟಿ. ಮೇಟಿ. ಮಹೇಶ ಗಡಗಿ, ಸಿದ್ದಣ್ಣ ನಂಜಪ್ಪನವರ, ಮಲ್ಲಿಕಾರ್ಜುನ ಪ್ಯಾಟಿ, ಮುತ್ತಣ್ಣ ಕೊಂತಿಕಲ್, ಶಂಕ್ರಪ್ಪ ಗಡಗಿ, ಬಾಬುಸಾಬ ಮೂಲಿಮನಿ, ಸಿದ್ದಣ್ಣ ಹಡಪದ, ಮುದಿಯಪ್ಪ ಗದಗಿನ, ಭರಮಪ್ಪ ಕೊಳ್ಳಾರ, ಸಿದ್ದಲಿಂಗಯ್ಯ ಸ್ಥಾವರಮಠ ಡಂಬಳ ಕೃಷಿ ಪತ್ತಿನ ಸಹಕಾರಿ ಸಂಘದ ಕಾರ್ಯದರ್ಶಿ ಸಂಗಮೇಶ ಬುಗಟಿ ಸೇರಿದಂತೆ ಇತರರಿದ್ದರು.

# ಮೂಳೆಗಳ ಬಲವರ್ಧನೆ ಉಚಿತ ತಪಾಸಣಾ ಶಿಬಿರ ನಾಳೆ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮುನ್ಸಿಪಲ್ ಹೈಸ್ಕೂಲ್ ಸಮೀಪದ ರಾಘಾ ಆಸ್ಪತ್ರೆಯಲ್ಲಿ ಡಿ. 20ರಂದು ಮೂಳೆಗಳ ಬಲವರ್ಧನೆಯ ಮೌಲ್ಯಮಾಪನ ಪರೀಕ್ಷೆ, ಡಿ. 21ಮತ್ತು 22ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಬೆಳಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ.

50 ವರ್ಷ ಮೇಲ್ಪಟ್ಟ ಪುರುಷರು ಮತ್ತು 45 ವರ್ಷ ಮೇಲ್ಪಟ್ಟ ಮಹಿಳೆಯರು ಈ ಶಿಬಿರದಲ್ಲಿ ಭಾಗವಹಿಸಬಹುದಾಗಿದ್ದು, ಅಸ್ತಮಾ, ಸಂಧಿವಾತ ಇತ್ಯಾದಿ ಕಾಯಿಲೆಗಳಿಗೆ ತುತ್ತಾಗಿ ಅನೇಕ ದಿನಗಳಿಂದ ಔಷಧಿ ಪಡೆಯುತ್ತಿರುವವರು, ಮಧುಮೇಹಿಗಳು, ಅತಿಯಾಗಿ ಧೂಮಪಾನ-ಮದ್ಯಪಾನದ ದುರಭ್ಯಾಸವಿರುವವರು ಮತ್ತು ಆನುವಂಶಿಕವಾಗಿ ಕಂಡುಬರುವ ಚಪ್ಪೆ ಮುರಿತ ಸಮಸ್ಯೆ ಇರುವವರು ಈ ಶಿಬಿರದಲ್ಲಿ ಭಾಗವಹಿಸಬಹುದಾಗಿದೆ.

ಎಲಬು, ಕೀಲು, ಸಂಧಿವಾತ ಮತ್ತು ನರರೋಗ ತಜ್ಞ ಡಾ. ರೋನಾಲ್ಡ್ ತಪಾಸಣೆ ನಡೆಸಲಿದ್ದಾರೆ. ಗರಿಷ್ಠ 200 ಜನರಿಗೆ ಯಾವುದೇ ಅಡ್ಡಪರಿಣಾಮಗಳಿಲ್ಲದ ಅತ್ಯಾಧುನಿಕ ತಪಾಸಣೆ ನಡೆಸಲಾಗುತ್ತದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ ದೂ.ಸಂ: 9483214777 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಫ್ರೂಟ್ಸ್ ನೋಂದಣಿ ಶೀಘ್ರ ಮಾಡಿಸಿ-ಡಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ಶೀಘ್ರವೇ ಸರಕಾರದಿಂದ ಬರ ಪರಿಹಾರ ಮೊತ್ತವನ್ನು ಪಾವತಿಸಲಾಗುತ್ತಿದ್ದು, ಜಿಲ್ಲೆಯ ರೈತ ಬಾಂಧವರು ಇನ್ನೆರಡು ದಿನದೊಳಗಾಗಿ ತಮಗೆ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ತೋಟಗಾರಿಕೆ, ಕಂದಾಯ ಇಲಾಖೆ, ಗ್ರಾಮ ಒನ್ ಅಥವಾ ಸಿ.ಎಸ್.ಸಿ. ಸೆಂಟರ್‌ಗಳಿಗೆ ಭೇಟಿ ನೀಡಿ ಎಫ್.ಐ.ಡಿ. ಮಾಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ತಿಳಿಸಿದ್ದಾರೆ.

ಜಿಲ್ಲೆಯ ಪ್ರತಿಯೊಬ್ಬ ರೈತರು ಸರಕಾರದ ಸೌಲಭ್ಯಗಳು ಹಾಗೂ ಸಹಾಯಧನ ಪಡೆಯಲು ರೈತರು ತಮಗೆ ಸಂಬಂಧಪಟ್ಟ ಎಲ್ಲಾ ಜಮೀನುಗಳನ್ನು (ಫ್ರೂಟ್ಸ್ ತಂತ್ರಾಂಶ) ಎಫ್.ಐ.ಡಿ ಗೆ ಕಡ್ಡಾಯವಾಗಿ ಜೋಡಣೆ ಮಾಡಿಸಬೇಕು. ಈಗಾಗಲೇ ಎಫ್.ಐ.ಡಿ. ಮಾಡಿಸಿಕೊಂಡ ರೈತರು ತಮ್ಮ ಎಫ್.ಐ.ಡಿ. ಗೆ ಎಲ್ಲ ಜಮೀನಿನ ಸರ್ವೆ ನಂಬರುಗಳು ಜೋಡಣೆಯಾಗಿದೆಯೋ ಅಥವಾ ಇಲ್ಲವೋ ಎಂದು ಕೂಡಲೇ ಪರಿಶೀಲಿಸಿಕೊಳ್ಳಿ ಮತ್ತು ಜಂಟಿ ಖಾತೆದಾರರಿದ್ದಲ್ಲಿ ಪ್ರತಿ ಒಬ್ಬ ಜಂಟಿ ಖಾತೆದಾರರು ಪ್ರತ್ಯೇಕವಾಗಿ ಸೌಲಭ್ಯವನ್ನು ಪಡೆಯಬೇಕೆಂದಲ್ಲಿ ಪ್ರತ್ಯೇಕವಾಗಿ ಎಫ್.ಐ.ಡಿ. ಮಾಡಿಸಿಕೊಳ್ಳಬೇಕೆಂದು ರೈತರ ಬಾಂಧವರಲ್ಲಿ ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

### ಪುರಸಭೆ ಸ್ಥಾಯಿ ಸಮಿತಿ ಸಭೆ | ಸಮಸ್ಯೆಗಳ ಪಟ್ಟಿ ನೀಡಿದ ಸದಸ್ಯರು

# ಸಾರ್ವಜನಿಕರ ಹಿತ ಕಾಪಾಡಿ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಪುರಸಭೆ ಸಭಾ ಭವನದಲ್ಲಿ ಸೋಮವಾರ ಸ್ಥಾಯಿ ಸಮಿತಿ ಚೇರಮನ್‌ರ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆ ನಡೆಯಿತು.

ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ ಮಾತನಾಡಿ, ಸಾರ್ವಜನಿಕರ ಹಿತವನ್ನು ಕಾಪಾಡಬೇಕಿರುವುದು ಆಡಳಿತ ಹಾಗೂ ಅಧಿಕಾರಿಗಳ ಕರ್ತವ್ಯವಾಗಿದೆ. ಆದರೆ, ಕೆಲ ಅಧಿಕಾರಿಗಳು ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಕೆಲಸ ನಿರ್ವಹಿಸುತ್ತಿದ್ದೀರಿ. ಪರಿಣಾಮ ಪಟ್ಟಣದ ದೇಗಿನಾಳ ಪ್ಲಾಟ್‌ನಲ್ಲಿ ನಿವೇಶನಗಳನ್ನು ಅಭಿವೃದ್ಧಿಪಡಿಸದ ಹಿನ್ನೆಲೆಯಲ್ಲಿ ಈ ಹಿಂದಿನ ಸಾಮಾನ್ಯ ಸಭೆಯಲ್ಲಿ ಠರಾವು ಪಾಸ್ ಮಾಡಿ ಪುರಸಭೆಯಲ್ಲಿ 10 ಉತಾರಗಳನ್ನು ತಡೆಹಿಡಿಯಲಾಗಿತ್ತು. ಅಲ್ಲದೆ ಬಡಾವಣೆಗಳು ಅಭಿವೃದ್ಧಿಯಾಗದಿದ್ದರೆ ಅಂತಹ ಬಡಾವಣೆಗಳಲ್ಲಿನ ಕೆಲ ಉತಾರಗಳನ್ನು ತಡೆಹಿಡಿದು ಬಡಾವಣೆಗಳನ್ನು ಅಭಿವೃದ್ಧಿಪಡಿಸಿದ ಬಳಿಕ ಉತಾರಗಳನ್ನು ವಿತರಿಸಬೇಕು ಎಂಬ ಸ್ಪಷ್ಟ ಕಾನೂನು ಇದ್ದರೂ ಸಹ ಅಧಿಕಾರಿಗಳು ನಿಯಮ ಹಾಗೂ ಆಡಳಿತ ಮಂಡಳಿಯ ಠರಾವು ಸಹ ಲೆಕ್ಕಿಸದೆ ಉತಾರಗಳನ್ನು ನೀಡುತ್ತೀರಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.




ಪುರಸಭೆ ಸದಸ್ಯೆ ವಿಜಯಾ ಮಳಗಿ ಮಾತನಾಡಿ, ಸರ್ಕಾರಿ ಶಾಲೆ ನಂ.4ರ ಶಾಲಾ ಕೊಠಡಗಳಲ್ಲಿ ಹಾಗೂ ಮೈದಾನದಲ್ಲಿ ಚರಂಡಿ ನೀರು ಬರುತ್ತದೆ. ಇಂತಹ ವಾತಾವರಣದಲ್ಲಿ ವಿದ್ಯಾರ್ಥಿಗಳು ಹೇಗೆ ವಿದ್ಯಾಭ್ಯಾಸ ಮಾಡಬೇಕು ಎಂದು ಪ್ರಶ್ನಿಸಿದರು. ಪುರಸಭೆ ಅಧಿಕಾರಿಗಳು ಈ ಸಮಸ್ಯೆಯನ್ನು ಸರಿಪಡಿಸಲು ಅಂದಾಜು 10 ಲಕ್ಷ ರೂ ಅಗತ್ಯವಿದೆ ಎಂದಾಗ, ಆ ಹಣವನ್ನು ನಾನೇ ನೀಡುತ್ತೇನೆ, ಶಾಲಾ ಮಕ್ಕಳಿಗೆ ಅನುಕೂಲವಾಗಲಿ ಎಂದರು.

ಪುರಸಭೆ ಸದಸ್ಯ ಮುದಿಯಪ್ಪ ಮುದೋಳ ಮಾತನಾಡಿ, ಪಟ್ಟಣದಲ್ಲಿ ಈ ಹಿಂದೆ ಶಾಸಕ ಕಳಕಪ್ಪ ಬಂಡಿ ಅವರು ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಉದ್ಘಾಟಿಸಿದರು. ಆದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಅವುಗಳ ಬಾಗಿಲು ಹಾಕಿವೆ. ಅದನ್ನು ಸರಿಪಡಿಸಿ ಎಂದಾಗ ಪುರಸಭೆ ಅಧಿಕಾರಿ ಪಿ.ಎನ್. ದೊಡ್ಡಮನಿ, ನಿರ್ವಹಣೆ ಮಾಡಲು ಯಾರೂ ಮುಂದೆ ಬರುತ್ತಿಲ್ಲ. ಈಗಾಗಲೇ ಪಟ್ಟಣದಲ್ಲಿ ಹೊಳೆ ನೀರು ಪೂರೈಕೆಯಾಗುತ್ತಿದೆ. ಹೊಳೆ ನೀರು ಶುದ್ಧೀಕರಣ ಆಗಿರುತ್ತದೆ. ಅದನ್ನು ಮತ್ತೆ ಶುದ್ಧೀಕರಿಸಲು ಬರುವುದಿಲ್ಲ ಎಂದರು.

ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

ಪಟ್ಟಣದಲ್ಲಿ ಪೂರೈಕೆಯಾಗುತ್ತಿರುವ ನೀರು ಬಹಳಷ್ಟು ಪೋಲಾಗುತ್ತಿದೆ. ನೀರನ್ನು ಮಿತವಾಗಿ ಬಳಸಲು ಜಾಗೃತಿ ಮೂಡಿಸಬೇಕಿದೆ. ಪಟ್ಟಣದ ಎಲ್ಲ ಚರಂಡಿಗಳಿಗೆ ಪೌಡರ್ ಹಾಕಿಸಿ, ಫಾಗಿಂಗ್ ಮಾಡಿಸಿ ಎಂಬ ಆಗ್ರಹದೊಂದಿಗೆ 22ನೇ ವಾರ್ಡಿನ ಅಂಗನವಾಡಿಗೆ ನೀರಿನ ವ್ಯವಸ್ಥೆ ಕಲ್ಪಿಸುವುದೂ ಸೇರಿದಂತೆ ಅನೇಕ ದೂರಗಳ ಪಟ್ಟಿಯನ್ನು ಪುರಸಭೆ ಸದಸ್ಯರಾದ ಲಕ್ಷ್ಮಿ ಮುಧೋಳ, ಶರಣಪ್ಪ ಉಪ್ಪಿನಬೆಟಗೇರಿ, ಕೌಸರಬಾನು ಹುನಗುಂದ, ದೀಪಾ ಗೌಡರ ಸಭೆಯಲ್ಲಿ ಪ್ರಸ್ತಾಪಿಸಿದರು.

## ನಗರಸಭೆ ಸದಸ್ಯ ಪ್ರಕಾಶ ಅಂಗಡಿಯವರಿಗೆ ಸನ್ಮಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಪತಂಜಲಿ ಯೋಗ ಸಮಿತಿ ಹಾಗೂ ಭಾರತ ಸ್ವಾಭಿಮಾನ್ ಟ್ರಸ್ಟ್ ಗದಗ ಮುನ್ಸಿಪಲ್ ಕಾಲೇಜ್ ಮೈದಾನದಲ್ಲಿ ಹೈಸ್ಕೂಲ್ ಸಮಿತಿ ಚೇರಮನ್ ಹಾಗೂ ನಗರಸಭಾ ಸದಸ್ಯರಾದ ಪ್ರಕಾಶ ಅಂಗಡಿಯವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ.ಎಸ್. ಗುಗ್ಗರಿಯವರು ವಹಿಸಿದ್ದರು. ಯೋಗ ಶಿಕ್ಷಕ ಗಿರಿಯಪ್ಪ ಮಡಿವಾಳರ ಸ್ವಾಗತ ಭಾಷಣವನ್ನು ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಕೆ.ಎಸ್. ಗುಗ್ಗರಿ ಹಾಗೂ ಎಸ್.ಎನ್. ಬಳ್ಳಾರಿ ಮೈದಾನ ಸ್ವಚ್ಛತೆಯ ಬಗ್ಗೆ ಪ್ರಕಾಶ ಅಂಗಡಿಯವರಿಗೆ ಮನವಿ ಮಾಡಿದರು. ಈ ಮನವಿಗೆ ಸ್ಪಂದಿಸಿದ ಪ್ರಕಾಶ ಅಂಗಡಿಯವರು, ಮೈದಾನ ಸ್ವಚ್ಛತೆ ಮಾಡಿಸುವುದಲ್ಲದೇ 2 ಹೈಮಾಸ್ಟ್ ಲೈಟ್ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಮತ, ಸದಾನಂದ, ಅಪ್ಪಣ್ಣ ಮಠದ, ಕಿಲಬಣ್ಣವರ, ಪ್ರಮೋದ ಬೇಲಿ, ಕೆ.ಸಿ. ಹಿರೇಮಠ, ರವಿ ಬೆಂಗಳೂರು, ಮಹಾಂತೇಶ ತಡಸದ, ಶಂಭು, ಕೋತಂಬರಿ, ಮಹಿಳೆಯರಾದ ರತ್ನಕ್ಕ ಕಲ್ಲೂರ, ಸುಧಾ ಚಳ್ಳಮರದ, ಇನ್ನೂ ಯೋಗ ಶಿಕ್ಷಕರು, ಯೋಗ ಸಾಧಕರು ಉಪಸ್ಥಿತರಿದ್ದರು. ಬಸವರಾಜ ಹಿರೇಮಠ ವಂದಿಸಿದರು.

### ಬೆಳ್ಳಟ್ಟಿ ಶ್ರೀ ರಾಮಲಿಂಗೇಶ್ವರ ಮಠದ ದೀಪೋತ್ಸವ

# ವಿನೂತನ ಕರ್ಪೂರ ಕಾರ್ತಿಕೋತ್ಸವ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಎಲ್ಲ ಕಡೆಗಳಲ್ಲಿಯೂ ಎಣ್ಣೆ, ಬತ್ತಿ ಹಚ್ಚಿ ಕಾರ್ತಿಕೋತ್ಸವ ಆಚರಣೆ ಮಾಡುತ್ತಾರೆ. ತಿನ್ನುವ ಪದಾರ್ಥಕ್ಕಾಗಿ ಬಳಸುವ ಎಣ್ಣೆ ಎಲ್ಲೆಂದರಲ್ಲಿ ಬಿದ್ದು ಹಾಳಾಗಿ ಹೋಗುತ್ತದೆ. ಇದೇ ಎಣ್ಣೆಯನ್ನು ಬಳಸಿ ದಾಸೋಹ ಮಾಡಿದರೆ ನಾಲ್ಕು ಜನರ ಹಸಿವು ನೀಗಿಸಿದ ಪುಣ್ಯ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಕರ್ಪೂರ ನಿರಂಜನ ನಿರ್ಭಯವಾಗಿರುವದರಿಂದ ಈ ಬಾರಿ ಕಾರ್ತಿಕೋತ್ಸವದಲ್ಲಿ ಇದನ್ನು ಬಳಸಲಾಗಿದೆ ಎಂದು ಬೆಳ್ಳಟ್ಟಿಯ ಶ್ರೀ ರಾಮಲಿಂಗೇಶ್ವರ ದಾಸೋಹ ಮಠದ ಬಸವರಾಜ ಸ್ವಾಮೀಜಿ ನುಡಿದರು.

ತಾಲೂಕಿನ ಬೆಳ್ಳಟ್ಟಿ ಗ್ರಾಮದ ಶ್ರೀ ರಾಮಲಿಂಗೇಶ್ವರ ದಾಸೋಹ ಮಠದಲ್ಲಿ ಜರುಗಿದ ಕಾರ್ತಿಕೋತ್ಸವವನ್ನು ವಿಶೇಷವಾಗಿ ಕರ್ಪೂರ ಹಚ್ಚಿ ದೀಪ ಬೆಳಗುವ ಮೂಲಕ ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಕಂಪ್ಲಿಯ ಪ್ರಭು ಸ್ವಾಮೀಜಿ, ಹರ್ಲಾಪೂರದ ಅಭಿನವ ಡಾ. ಕೊಟ್ಟೂರೇಶ್ವರ ಸ್ವಾಮೀಜಿ, ಕುಕನೂರಿನ ಡಾ: ಮಹಾದೇವ ಸ್ವಾಮೀಜಿ, ಪ್ರಶಾಂತಲಿಂಗ ಸ್ವಾಮೀಜಿ, ತಂಗೋಡದ ಶಿವಕುಮಾರ ಸ್ವಾಮೀಜಿ ಮಾತನಾಡಿ, ತಮ್ಮ ಪುರಾಣ ಪ್ರವಚನಗಳಿಂದ ಸುಂದರವಾದ ಮಠವನ್ನು ಕಟ್ಟಿ, ಒಡೆದ ಮನಸ್ಸುಗಳನ್ನು ಕೂಡಿಸುವುದರ ಮೂಲಕ ಇಡೀ ರಾಜ್ಯಕ್ಕೆ ಮಾದರಿಯಾದ ಮಠವನ್ನು ನಿರ್ಮಾಣ ಮಾಡಿದ್ದಾರೆ. ವಿನೂತನ ಕರ್ಪೂರ ಕಾರ್ತಿಕೋತ್ಸವ ನಮಗೆಲ್ಲಾ ಸಂತಸ ತಂದಿದೆ ಎಂದರು.

ಪ್ರೊ. ದೇವರಾಜ ರಾಯರೆಡ್ಡಿ ಶ್ರೀಮಠದ ಚರಿತ್ರೆ ಮತ್ತು ಐತಿಹಾಸಿಕ ಪರಂಪರೆಯ ಕುರಿತು ಉಪನ್ಯಾಸ ನೀಡಿದರು. ಸಂಕ್ಲೀಪುರ, ಬಡ್ನಿ ಗ್ರಾಮದ ಭಜನಾ ಮಂಡಳಿಗಳು ಭಕ್ತಿ ಪದಗಳ ಕಾರ್ಯಕ್ರಮ ನಡೆಸಿಕೊಟ್ಟರು.

ಅಗಡಿ-ಗುತ್ತಲ ಮಠದ ಗುರುಸಿದ್ದ ಸ್ವಾಮೀಜಿ, ಮಾಜಿ ಶಾಸಕ ಜಿ.ಎಸ್. ಗಡ್ಡದ್ದೇವರಮಠ, ಶಾಸಕ ಡಾ. ಚಂದ್ರು ಲಮಾಣಿ, ಬೆಳ್ಳಟ್ಟಿ ಸೇರಿದಂತೆ ಸುತ್ತಮುತ್ತಲಿನ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಶ್ರೀಮಠದ ವತಿಯಿಂದ ಕೊಡಮಾಡುವ 'ದಾಸೋಹಿ' ಪ್ರಶಸ್ತಿಯನ್ನು ಅಗಡಿ-ಗುತ್ತಲ ಮಠದ ಗುರುಸಿದ್ದ ಸ್ವಾಮೀಜಿಗಳಿಗೆ ನೀಡಲಾಗುತ್ತಿದೆ. ಕೋವಿಡ್‌ನ ಸಂದಿಗ್ಧ ಪರಿಸ್ಥಿತಿಯಲ್ಲಿ ಎಷ್ಟೋ ಜನರು ಬದುಕಿದರೆ ಸಾಕು ಎಂದು ಮನೆಯಲ್ಲೇ ಕುಳಿತಿದ್ದರು. ಅಂತಹ ಸಂದರ್ಭದಲ್ಲಿ ಶ್ರೀಗಳು 50 ದಿನಗಳ ಕಾಲ ನಿರಂತರವಾಗಿ ಗುತ್ತಲ ಮಠದಲ್ಲಿ ನಿತ್ಯವೂ 3 ಬಾರಿ ಅನ್ನಸಂತರ್ಪಣೆ ಮಾಡಿದ್ದಾರೆ. ಇದಲ್ಲದೇ ಜಗಜ್ಯೋತಿ ಬಸವೇಶ್ವರರ 21 ಅಡಿಯ ಏಕಶಿಲಾ ಮೂರ್ತಿ ಮಾಡಿಸಿದ್ದಾರೆ. ಶ್ರೀಮಠದ ವತಿಯಿಂದ ಅನೇಕ ಸಾಮಾಜಿಕ-ಶೈಕ್ಷಣಿಕ ಕೆಲಸಗಳನ್ನು ನಿರಂತರ ಮಾಡುತ್ತಾ ಬರುತ್ತಿರುವದರಿಂದ ಅವರ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಶ್ರೀಗಳು ತಿಳಿಸಿದರು.

### ಗದಗ ಜಿಲ್ಲಾ ಮಾದಿಗ ಮುನ್ನಡೆ ಆತ್ಮಗೌರವ ಸಮಾವೇಶದಲ್ಲಿ ಶಾಸಕ ಸಿ.ಸಿ. ಪಾಟೀಲ್ ಅಭಿಮತ

# ಪ್ರತಿಯೊಬ್ಬರೂ ಸಹಬಾಳ್ವೆಯಿಂದ ಬದುಕೋಣ

■ ವಿಜಯಸಾಕ್ಷಿ ಸುದ್ದಿ, ಗದಗ

12ನೇ ಶತಮಾನದಲ್ಲಿ ನಡೆದ ಸಮಾನತೆಯ ಹೋರಾಟ ಇಂದಿಗೂ ಮುಂದುವರೆದಿರುವುದು ರಾಜಕೀಯ ಇಚ್ಛಾಶಕ್ತಿಯ ಕೊರತೆಯನ್ನು ಬಿಂಬಿಸುತ್ತದೆ. ಹೀಗಾಗಿ, ಸಮಾಜದಲ್ಲಿ ಏಕತೆ ಬರಬೇಕು ಎಂದು ಶಾಸಕ ಸಿ.ಸಿ. ಪಾಟೀಲ್ ಅಭಿಪ್ರಾಯಪಟ್ಟರು.

ನಗರದ ಡಾ.ಪಂಡಿತ ಭೀಮಸೇನ ಜೋಶಿ ರಂಗಮಂದಿರದಲ್ಲಿ ನಡೆದ 'ರಾಜ್ಯದೆಲ್ಲೆಡೆ ಮಾದಿಗ ಮುನ್ನಡೆ' ಆತ್ಮಗೌರವ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಎಲ್ಲ ವರ್ಗದ ಜನರು ಸಮಾನತೆಯಿಂದ ಬದುಕುವ ಕಾಲ ಬರಬೇಕು. ಈ ನಿಟ್ಟಿನಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿದ್ದ ಎಸ್ಸಿ, ಎಸ್ಟಿ ವರ್ಗಗಳ ಮೀಸಲಾತಿಯನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಹೆಚ್ಚಿಸಿದ್ದು, ಮೀಸಲಾತಿ ಹೆಚ್ಚಳವು ಶೀಘ್ರವೇ ಕಾರ್ಯರೂಪಕ್ಕೆ ಬಂದು ಮಾದಿಗ ಸಮಾಜಕ್ಕೆ ನ್ಯಾಯ ಸಿಗಬೇಕು. ಈ ಮೂಲಕ ಪ್ರತಿಯೊಬ್ಬರೂ ಸಹಬಾಳ್ವೆಯಿಂದ ಬದುಕೋಣ ಎಂದರು.



ಚಿತ್ರದುರ್ಗದ ಮಾದರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿ ಮಾತನಾಡಿ, ಮೂವತ್ತು ವರ್ಷಗಳ ಹೋರಾಟದ ಫಲವಾಗಿ ಕಳೆದ ಬಿಜೆಪಿ ಸರ್ಕಾರ ನ್ಯಾ. ಎ.ಜೆ. ಸದಾಶಿವ ಆಯೋಗದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಮೂಲಕ ಹೋರಾಟಕ್ಕೆ ತಿಲಾಂಜಲಿ ನೀಡಿದೆ. ಮಾದಿಗ ಸಮಾಜದ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಸ್ಥಿತಿಗತಿಯನ್ನು ಅರಿತು ಸಾಮಾಜಿಕ ನ್ಯಾಯ ಒದಗಿಸಿಕೊಟ್ಟಿದೆ ಎಂದರು.

ಮಾಜಿ ಶಾಸಕ ಬಸವರಾಜ ದಡೇಸಗೂರು ಮಾತನಾಡಿ, ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾದಿಗ ಸಮಾಜಕ್ಕೆ ನ್ಯಾಯ ಕೊಡಿಸುವ ಕೆಲಸವಾಗಿದೆ. ನ್ಯಾ.ಸದಾಶಿವ ಆಯೋಗದ ವರದಿ ಜಾರಿ ಮಾಡುತ್ತೇನೆಂದು ಮಾದಿಗ ಸಮಾಜಕ್ಕೆ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡುತ್ತಾ ಬಂದಿದೆ ಎಂದರು.

ನ್ಯಾ. ಎ.ಜೆ. ಸದಾಶಿವ ಆಯೋಗದ ವರದಿಯ ಕುರಿತು ಇರುವ ಪರ-ವಿರೋಧದ ಬಗ್ಗೆ ಜಗದೀಶ್ ಬೆಟ್ಟಳ್ಳಿಯವರು ವಿವರಿಸಿದರು. ಮಾದಿಗ ಸಮಾಜದ ಮುಖಂಡ ಚಂದ್ರಶೇಖರ್ ಹರಿಜನ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ, ವಿಜಯಕುಮಾರ ಅಡಕಿ, ಭೀಮಣ್ಣ ಬಿಲ್ಲವ, ಗಣೇಶ ಹೊರಟತನಾಳ, ಮಂಜುನಾಥ ಕೊಂಡಪಲ್ಲಿ, ಪಡಿಯಪ್ಪ ಪೂಜಾರ, ಮೋಹನ್ ಆಲಮೇಲಕರ, ಉಡಚಪ್ಪ ಹಳ್ಳಿಕೇರಿ,ವೀರಣ್ಣ ಮೌರ್ಯ, ಗುರುನಾಥ ದಾನಪ್ಪನವರ, ಗದಗ-ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಮಂಜುನಾಥ ಕೊಟ್ನೇಕಲ್, ಅಶೋಕ ಕುಡತಿನಿ, ಲಕ್ಷ್ಮಣ ದೊಡ್ಡಮನಿ, ಚಂದ್ರಶೇಖರ್ ಮಾದರ, ಮಂಜು ಬುರಡಿ, ಮೋಹನ್ ಗುತ್ತೆಮ್ಮನವರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಬಸವರಾಜ್ ಮುಳ್ಳಾಳ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಪರಿಶಿಷ್ಟ ಜಾತಿಯ ಮೀಸಲಾತಿಯ ಪ್ರಮಾಣವನ್ನು ಶೇ. 15ರಿಂದ ಶೇ. 17ಕ್ಕೆ ಹೆಚ್ಚಿಸಿ ಒಳ ಮೀಸಲಾತಿಯ ವರ್ಗೀಕರಣವನ್ನು ಯಥಾವತ್ತಾಗಿ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ. ಕೇಂದ್ರ ಸರ್ಕಾರವೂ ಮಾದಿಗ ಸಮಾಜಕ್ಕೆ ನ್ಯಾಯ ಒದಗಿಸಿ ಕೊಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಹೀಗಾಗಿ ಹೋರಾಟದ ಫಲಕ್ಕೆ ನ್ಯಾಯ ಒದಗಿಸಿಕೊಟ್ಟಿರುವವರಿಗೆ ಕೃತಜ್ಞರಾಗಿರುವುದರ ಜೊತೆಗೆ ಮಾದಿಗ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಈ ಬಗ್ಗೆ ಮನವರಿಕೆ ಮಾಡಿಕೊಡಬೇಕು ಎಂದು ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿ ನುಡಿದರು.

# ಮಾಜಿ ಸೈನಿಕರ ಸಂಘದಿಂದ 'ವಿಜಯ ದಿವಸ' ಆಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಗದಗ ಜಿಲ್ಲಾ ಘಟಕದ 2ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ 'ವಿಜಯ ದಿವಸ'ವನ್ನು ಆಚರಿಸಿ, ಭಾರತ-ಪಾಕಿಸ್ತಾನ ಯುದ್ಧದಲ್ಲಿ ಮಡಿದ ವೀರ ಯೋಧರಿಗೆ, ಮಂಗಳೂರಿನ ಹುತಾತ್ಮ ವೀರಯೋಧ ಕ್ಯಾಪ್ಟನ್ ಪ್ರಾಂಜಲ್ ಅವರಿಗೆ ಗೌರವ ನಮನಗಳನ್ನು ಸಲ್ಲಿಸಲಾಯಿತು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶಿರೋಳ ಗವಿಮಠದ ಪರಮ ಪೂಜ್ಯರಾದ ಶ್ರೀ ಯಚ್ಚರೇಶ್ವರ ಮಹಾಸ್ವಾಮಿಗಳು ವಹಿಸಿಕೊಂಡಿದ್ದರು. ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ರಾಜ್ಯಾಧ್ಯಕ್ಷ ಡಾ. ಶಿವಣ್ಣ ಎನ್.ಕೆ. ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಘದ ಗದಗ ಜಿಲ್ಲಾಧ್ಯಕ್ಷ ಬಸಲಿಂಗಪ್ಪ ಮುಂಡರಗಿ ವಹಿಸಿದ್ದರು.




ಡಾ. ಎನ್.ಕೆ. ಶಿವಣ್ಣ ಹಾಗೂ ನರಗುಂದ ತಾಲೂಕು ಶಿರೋಳ ಗವಿಮಠದ ಪರಮಪೂಜ್ಯರಾದ ಅಭಿನವ ಯಚ್ಚರೇಶ್ವರ ಮಹಾಸ್ವಾಮಿಗಳು, ಬಸಲಿಂಗಪ್ಪ ಮುಂಡರಗಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ವೇಣು ಸಿ., ಸಂಘಟನಾ ಕಾರ್ಯದರ್ಶಿ ರಮೇಶ್ ಗೌಡ, ಧನಂಜಯ್ ಬಿ.ಪಿ., ಶ್ರೀನಿಂಗಪ್ಪ ಸಿಗೋಟಿ, ಮಂಜುನಾಥ್, ಎನ್. ಎಸ್. ಪಾಟೀಲ್, ಶಿವಪುತ್ರಪ್ಪ ಸಂಗನಾಳ, ರಂಗಪ್ಪ ತಳವಾರ್, ಮಂಜುನಾಥ ಪರ್ವತಗೌಡ್ರು, ಆನಂದಯ್ಯ ವಿರಕ್ತಮಠ, ಮಂಜುನಾಥ ಮುಳಗುಂದ, ಸಂಗಮೇಶ್ ಮಾನೇದ, ನಾಗರಾಜ್ ಕುಂದರಗಿ, ಗದಗ ಜಿಲ್ಲೆಯ ಎಲ್ಲಾ ಸೈನಿಕ ಕುಟುಂಬದವರು ಉಪಸ್ಥಿತರಿದ್ದರು.

# ಕೊಟ್ಟ ಮಾತಿನಂತೆ ನಡೆದಿದ್ದೇವೆ

▶▶ ಮೊದಲನೇ ಪುಟದಿಂದ

'ಶಕ್ತಿ' ಯೋಜನೆಗೆ ಸರ್ಕಾರ ಮೀಸಲಿಟ್ಟ ಹಣ ಪೂರ್ಣಗೊಂಡಿದೆ ಎಂಬ ಬಗ್ಗೆ ಉತ್ತರಿಸಿ, ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆಯೋ ಅಷ್ಟು ಹಣ ಒದಗಿಸಲಾಗುವುದು. ಶಕ್ತಿ ಯೋಜನೆಗೆ ಪ್ರತಿ ವರ್ಷ ವೆಚ್ಚವಾಗುವ ಹಣವನ್ನು ಕೆ.ಎಸ್.ಆರ್.ಟಿ. ಸಿಗೆ ಸರ್ಕಾರ ತುಂಬಿಕೊಡುತ್ತದೆ. ಬಸ್ಸುಗಳ ದುರಸ್ತಿ ಹಾಗೂ ಹೊಸ ಬಸ್ಸುಗಳ ಖರೀದಿಯೂ ಆಗಲಿದೆ. ಅನುದಾನವಿಲ್ಲ ಎಂದಿರುವ ಅಧಿಕಾರಿಗಳ ಹೆಸರು ನೀಡಿದರೆ ಪರಿಶೀಲನೆ ನಡೆಸಲಾಗುವುದು. ನಮ್ಮ ಸರ್ಕಾರದಲ್ಲಿ ಘೋಷಿಸಿರುವ ಯೋಜನೆಗಳಿಗೆ ಅನುದಾನದ ಕೊರತೆ ಇಲ್ಲ, ಅಭಿವೃದ್ಧಿ ಕೆಲಸಗಳು ನಿಂತಿಲ್ಲ ಎಂದರು.

ಕರೊನಾ ಇಡೀ ದೇಶದಲ್ಲಿ ಹೊಸ ತಳಿ ಶುರುವಾಗಿದ್ದು, ಈ ಬಗ್ಗೆ ಆರೋಗ್ಯ ಸಚಿವರು ಕೂಡಲೇ ಸಭೆ ನಡೆಸಿ ಮುನ್ನೆಚ್ಚರಿಕಾ ಕ್ರಮ ವಹಿಸಲು ಸೂಚಿಸಲಾಗಿದೆ. ಬೆಳಗಾವಿಯಲ್ಲಿ ಮಹಿಳೆ ಮೇಲಾದ ದೌರ್ಜನ್ಯ ಪ್ರಕರಣವನ್ನು ಎಲ್ಲಿಗೆ ಬೇಕಾದರೂ ವಹಿಸಲು ಸಿದ್ಧ. ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ನಮ್ಮ ಪೊಲೀಸರು ತನಿಖೆ ಮಾಡಲು ಸಮರ್ಥರಿದ್ದಾರೆ ಎಂದರು.

ಕ್ಯಾಶ್ ಕಾರ್ಡ್ ಬ್ಯಾಂಕ್ ಸೊಸೈಟಿಗಳಲ್ಲಿ ರೈತರಿಗೆ ನೀಡಿರುವ ಸಾಲದ ಅಸಲು ಕಟ್ಟಿದರೆ ಬಡ್ಡಿ ಮನ್ನಾ ಮಾಡಲಾಗುವುದು ಎಂದು ತಿಳಿಸಿದರು. ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ ಇಲಾಖೆಗಳು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಒಂದು ಸೂತ್ರ ರೂಪಿಸುತ್ತಿದ್ದಾರೆ. ಈ ಸಂಬಂಧ ಸಭೆ ನಡೆಸಿದ ನಂತರ ಪರಿಹಾರ ಸೂತ್ರವನ್ನು ಸರ್ಕಾರಕ್ಕೆ ನೀಡುತ್ತಾರೆ. ತದನಂತರ ಸರ್ಕಾರ ಪರಿಶೀಲನೆ ನಡೆಸಲಿದೆ. ಈ ಕೆಲಸವನ್ನು ತ್ವರಿತವಾಗಿ ನಡೆಸಲು ಸೂಚಿಸಲಾಗಿದೆ ಎಂದರು.

ಕರ್ನಾಟಕ ಸರ್ಕಾರ
**ಗ್ರಾಮ ಪಂಚಾಯತ ಕಾರ್ಯಾಲಯ ಇಟಗಿ**
ತಾ : ಗಜೇಂದ್ರಗಡ ಜಿ : ಗದಗ
e-mail : itagi.ron.gdg@gmail.com
ನಂ: ಗ್ರಾ.ಪಂ./ಇಟಗಿ/ಟೆಂಡರ/2023-24/ ದಿನಾಂಕ : 18-12-2023

**ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ ನಿಯಮಗಳನ್ವಯ ಅರ್ಹ ಗುತ್ತೇದಾರ/ಸರಬುದಾರ ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ **01** ಕಾಮಗಾರಿಯ ಗುಣಮಟ್ಟದ ಸಾಮಗ್ರಿ ಪೂರೈಕೆಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2023-24ನೇ ಸಾಲಿನ **MGNREGA** ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರ/ಸರಬರಾಜುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **https://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆಗಳು ಈ ಕೆಳಗಿನಂತೆ ಇರುತ್ತವೆ. (1) **INDENT NO : RDPR/2023-24/ IND0467** ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. : **Rs: 6,09,978/-**

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಂತೆ, ಇ.ಎಂ.ಡಿ. ಸಂಬಂದಪಟ್ಟಿ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **18-12-2023** ರಿಂದ **26-12-2023** ರಂದು 16.30 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ: **27-12-2023** ರಂದು 16.30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

**ಸಹಿ/- ಪಂಚಾಯತ ಅಭಿವೃದ್ಧಿ ಅಧಿಕಾರಿ**
ವಾಸಾಸಂಇ/ಗದಗ/ಕೆಎಸ್‌ಎಂಸಿಎ/389/2023-24 **ಗ್ರಾಮ ಪಂಚಾಯತ ಇಟಗಿ**

# ಶ್ರೀ ದತ್ತ ಜಯಂತಿ ಮಹೋತ್ಸವ ನಾಳೆಯಿಂದ



■ವಿಜಯಸಾಕ್ಷಿ ಸುದ್ದಿ, ಗದಗ

ಶಹರದ ಭೀಷ್ಮ ಕೆರೆ ಹತ್ತಿರವಿರುವ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ವಿಶ್ವಂಶಾತಿ ಪ್ರೀತ್ಯರ್ಥವಾಗಿ ಡಿ.20ರಿಂದ ಡಿ.26ರವರೆಗೆ ಶ್ರೀ ದತ್ತ ಜಯಂತಿ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರತಿದಿನ ಮುಂಜಾನೆ 8 ಗಂಟೆಗೆ ಶ್ರೀ ಪಾಂಡುರಂಗ ಭಟ್ಟ ಪೂಜಾರ ಇವರಿಂದ ಶ್ರೀ ಗುರು ಚರಿತ್ರೆ ಪಾರಾಯಣ, ಸಂಜೆ 5 ಗಂಟೆಗೆ ಶ್ರೀ ದಿಗಂಬರಶಾಸ್ತ್ರಿ ಹಂದಿಗೋಳ (ಕುರ್ತಕೋಟಿ) ಇವರಿಂದ ಶ್ರೀ ಗುರು ಚರಿತ್ರೆ ಪುರಾಣ ಮತ್ತು ಸಾಯಂಕಾಲ 6 ಗಂಟೆಗೆ ಮಂತ್ರಪುಷ್ಪ, ಪ್ರಸಾದ ವಿತರಣೆ ಜರುಗುವುದು.

ಡಿ. 22ರಂದು ಸಂಜೆ ಗೀತಾ ಜಯಂತಿ ಮತ್ತು 7 ಗಂಟೆಗೆ ಉಪನಿಷತ್ ಪಠಣ ಜರುಗುವುದು. ಡಿ.26ರ ಮುಂಜಾನೆ 7 ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ, ನಂತರ 8 ಗಂಟೆಗೆ ರುದ್ರಾಭಿಷೇಕ, ಮಧ್ಯಾಹ್ನ 3 ಗಂಟೆಗೆ ಶ್ರೀ ಗುರುಚರಿತ್ರೆ ಪುರಾಣ, 4 ಗಂಟೆಗೆ ಕೀರ್ತನೆ, 6 ಗಂಟೆಗೆ ಶ್ರೀ ದತ್ತ ಜನ್ಮೋತ್ಸವ ನಂತರ ಪಾಲಕಿ ಸೇವಾ, ಅಷ್ಟಾವಧಾನ ಕಾರ್ಯಕ್ರಮಗಳು ನರವೇರಲಿವೆ.

ಎಲ್ಲ ಸದ್ಭಕ್ತರು ತನು-ಮನ-ಧನದಿಂದ ಸಹಕರಿಸಿ, ಸಕಾಲಕ್ಕೆ ಆಗಮಿಸಿ, ಶ್ರೀ ದತ್ತನ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನ ಟ್ರಸ್ಟ್ ಕಮಿಟಿಯ ಸದಸ್ಯರು ವಿನಂತಿಸಿದ್ದಾರೆ.

# ಡಿ.29ರಂದು ಶ್ರೀ ಹೊಳಲಮ್ಮದೇವಿ ಕಾರ್ತಿಕೋತ್ಸವ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ಶ್ರೀಮಂತಗಡದ ಆದಿಶಕ್ತಿ ಶ್ರೀ ಹೊಳಲಮ್ಮದೇವಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಕೊನೆಯ ಮಂಗಳವಾರ ದಿನವಾದ ಡಿ.29ರಂದು ಕಾರ್ತಿಕೋತ್ಸವ ಆಚರಿಸಲಾಗುವುದು. ಅಂದು ಬೆಳಿಗ್ಗೆ 6ಗಂಟೆಗೆ ವಿಶೇಷ ಅಭಿಷೇಕ ಮತ್ತು ಪೂಜೆ-ಪುನಸ್ಕಾರಗಳು ನಡೆಯಲಿವೆ.

ಸಂಜೆ 7ಗಂಟೆಗೆ ದೇವಸ್ಥಾನದ ಬಳಿ ದೀಪ ಬೆಳಗುವ ಕಾರ್ಯಕ್ರಮ, ಪಲ್ಲಕ್ಕಿ ಉತ್ಸವ, ನಂತರ ಅನ್ನಪ್ರಸಾದ ಜರುಗುವುದು. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಮಿತಿಯ ಪ್ರಕಟಣೆ ತಿಳಿಸಿದೆ.

# ನಾಳೆ ವಿದ್ಯುತ್ ವ್ಯತ್ಯಯ

■ವಿಜಯಸಾಕ್ಷಿ ಸುದ್ದಿ, ಗದಗ

110 ಕೆವ್ಹಿ ಬೆಟಗೇರಿ/110 ಕೆವ್ಹಿ ಸಂಭಾಪೂರ ರಸ್ತೆ ಗದಗ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಡಿ.20ರಂದು ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5.30ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. 110 ಕೆವ್ಹಿ ಬೆಟಗೇರಿ ಕೇಂದ್ರದಿಂದ ವಿದ್ಯುತ್ ಪೂರೈಕೆಯಾಗುತ್ತಿರುವ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶಗಳ 11 ಕೆವ್ಹಿ ವಿತರಣಾ ಮಾರ್ಗಗಳಲ್ಲಿ, ಎನ್.ಜೆ.ವೈ, ಸೋಲಾರ್, ಕೆ.ಐ.ಎ.ಡಿ.ಬಿ ಕೈಗಾರಿಕಾ ಮತ್ತು ಈ.ಐ.ಪಿ. ಫೀಡರ್ಸ್ ಹಾಗೂ 110 ಕೆವ್ಹಿ ಸಂಭಾಪೂರ ರಸ್ತೆ ಗದಗ ಉಪ ವಿದ್ಯುತ್ ವಿತರಣಾ ಕೇಂದ್ರದಿಂದ ವಿತರಣೆಯಾಗುವ 110 ಕೆ.ವಿ ರೇಲ್ವೆ ಮಾರ್ಗ ಹಾಗೂ 11 ಕೆ.ವಿ ಫಿಡರ್‌ಗಳಾದ ವಿವೇಕಾನಂದ ನಗರ, ಹೊಸ ಬಸ್‌ಸ್ಟ್ಯಾಂಡ್, ಪಂಚಾಕ್ಷರಿ ನಗರ, ರಾಜೀವಗಾಂಧಿ ನಗರ, ಬುರುಬುರೆ ಪ್ಲಾಟ್, ಹಮಾಲರ ಪ್ಲಾಟ್, ಆನಂದಾಶ್ರಮ ರಸ್ತೆ, ಜೆ.ಟಿ ಕಾಲೇಜ್ ರಸ್ತೆ, ಕೆ.ಹೆಚ್.ಬಿ-1 ಮತ್ತು ಕೆ.ಹೆಚ್.ಬಿ-2 ರ ಗ್ರಾಹಕರಿಗೆ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಈ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ತಿಳಿಸಲಾಗಿದೆ.

## ಜೈನ ದೀಕ್ಷಾರ್ಥಿಗಳಿಗೆ ಅನುಮೋದನೆ ಸಮಾರಂಭ । ಧರ್ಮೋಪದೇಶದ ಪ್ರವಚನ

# ಧರ್ಮದ ಹಾದಿಯಲ್ಲಿ ಮುನ್ನಡೆಯಿರಿ

■ವಿಜಯಸಾಕ್ಷಿ ಸುದ್ದಿ, ಗದಗ

ಎಲ್ಲರೂ ಶಾಂತಿ, ನೆಮ್ಮದಿ ಹಾಗೂ ಸಂಯಮದಿಂದ ಜೀವನ ಮಾಡಬೇಕು. ಅಹಿಂಸೆ ಬೇಡ ಶಾಂತಿ, ಸನ್ಮಾರ್ಗದಿಂದ ಕಾಯಕ ಮಾಡಬೇಕು. ಧರ್ಮದ ಹಾದಿಯಲ್ಲಿ ಮುನ್ನಡೆಯಬೇಕು ಎಂದು ಜೈನ ಮುನಿಗಳಾದ ಪೂಜ್ಯ ಕೇಶರಸುರೀಶ್ವರ್ಜಿ ಎಂ.ಎಸ್. ಹೇಳಿದರು.

ಅವರು ಸೋಮವಾರ ಗದುಗಿನ ಪಾರ್ಶ್ವನಾಥ ಜೈನ ದೇವಸ್ಥಾನದ ಸಭಾಂಗಣದಲ್ಲಿ ಜೈನ್ ಧರ್ಮದ ದೀಕ್ಷಾರ್ಥಿಗಳ (ಮುಮುಕ್ಷಗಳು) ಅನುಮೋದನೆ ಸಮಾರಂಭದಲ್ಲಿ ಧರ್ಮೋಪದೇಶದ ಪ್ರವಚನದಲ್ಲಿ ಮಾತನಾಡಿದರು.

ಜೈನ ಧರ್ಮದಲ್ಲಿ ಸನ್ಯಾಸ ದೀಕ್ಷೆ ಮಹತ್ವದ್ದಾಗಿದೆ. ಆಸ್ತಿ-ಅಂತಸ್ತು, ಸಂಸಾರವನ್ನು, ಐಷಾರಾಮಿ ಜೀವನವನ್ನು ತ್ಯಜಿಸಿ ಲೋಕ ಕಲ್ಯಾಣಾರ್ಥವಾಗಿ ಧರ್ಮ ಗುರು, ಮುನಿಗಳಿಂದ ದೀಕ್ಷೆ ಪಡೆದು ಲೋಕ ಸಂಚಾರ ಮಾಡುತ್ತ ಧರ್ಮ ಪ್ರಚಾರ, ಭಕ್ತರಿಗೆ ಬೋಧನೆ ಮಾಡುವದಾಗಿದೆ ಎಂದರು.

ಜೈನ ಧರ್ಮ, ತತ್ವ ಸಿದ್ಧಾಂತಗಳಿಂದ ಪ್ರೇರಿತರಾಗಿ ಸರ್ವಸ್ವವನ್ನು ತ್ಯಾಗ ಮಾಡಿ ಸನ್ಯಾಸ ದೀಕ್ಷೆ ಪಡೆಯಲು ಕುಟುಂಬದವರ ಅನುಮತಿಯೊಂದಿಗೆ ಮುಂದಾಗಿರುವ ಮುಮುಕ್ಷಗಳು ಧರ್ಮ ಕಾರ್ಯ ಕೈಗೊಂಡು ಭಕ್ತರಿಗೆ ಧರ್ಮೋಪದೇಶ ಮಾಡಲಿ. ಧರ್ಮ ಪ್ರಚಾರಕ್ಕಾಗಿ ಬಿಟ್ಟುಕೊಟ್ಟ ಇವರ ಪಾಲಕರ ತ್ಯಾಗವೂ ಸಹ ದೊಡ್ಡದು ಎಂದರು.



ದೀಕ್ಷಾರ್ಥಿಗಳಾದ ರುನಾಲಕುಮಾರ ಹಾಗೂ ವಿನಿತ್‌ಕುಮಾರ ಮಾತನಾಡಿ, ಸ್ವಯಂ ಪ್ರೇರಣೆಯಿಂದ ದೀಕ್ಷೆ ಪಡೆಯಲಿರುವ ನಮಗೆ ಕುಟುಂಬದ ಸಹಮತದ ಅನುಮೋದನೆ ಇದ್ದು ಎಲ್ಲವನ್ನೂ ತ್ಯಾಗ ಮಾಡಿ ದೀಕ್ಷೆಯ ಬಳಿಕ ಧರ್ಮ ಪ್ರಚಾರಕ್ಕಾಗಿ ಸಂಚರಿಸುವದಾಗಿ ಹೇಳಿದರು.

ಶ್ರೀಮತಿ ವಿಮಲಾಬಾಯಿ ಮಿಲಾಪಚಂದ ಕೊಠಾರಿ, ಶ್ರೀಮತಿ ಜಯಶ್ರೀ ಲಲಿತಕುಮಾರ ಕೊಠಾರಿ, ಶ್ರೀಮತಿ ಸಾರಿಕಾ ಈಶ್ವರಚಂದ ಪರಮಾರ ಅವರನ್ನು ಗೌರವಿಸಲಾಯಿತು. ಪ್ರಾಚಿ ಜೈನ್ ಸ್ವಾಗತಿಸಿ ನಿರೂಪಿಸಿದರು, ತನುಜಾ ಜೈನ್ ಪರಿಚಯಿಸಿದರು. ದಿಲೀಪ ಜೈನ್ ವಂದಿಸಿದರು.

ಪೂಜ್ಯ ವಿಗ್ನಾಯಣಪ್ರಭಾ ಸುರೀಶ್ವರ್ಜಿ ಎಂ.ಎಸ್, ಪೂಜ್ಯ ಸಾಧ್ವಿ ಅರಿಹಂತಪ್ರಭಾಶ್ರೀಜೀ ಎಂ.ಎಸ್ ಹಾಗೂ ಪೂಜ್ಯ ಪರಾಗಪ್ರಭಾಶ್ರೀ ಎಂ.ಎಸ್ ಉಪಸ್ಥಿತರಿದ್ದರು. ಸಮಾರಂಭದಲ್ಲಿ ರಾಣಮಲ್ಲ ಸೋಳಂಕಿ, ನರಭಯಲಾಲಜಿ ಹುಂಡಿಯಾ, ಪ್ರಕಾಶ ಭಾಪಣಾ, ಅಶೋಕ ಜೈನ್, ಚಂದ್ರಕಾಂತ ಜೈನ್, ಸುರೇಶ ಕೋಠಾರಿ, ನರೇಶ ಜೈನ್, ಸುರೇಶ ಓಸವಾಲ, ಪ್ರಕಾಶ ಶಹಾ, ಜೀತೇಂದ್ರ ಶಹಾ ಸೇರಿದಂತೆ ಜೈನ್ ಸಮಾಜಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಲಲಿತಕುಮಾರ-ಶ್ರೀಮತಿ ಜಯಶ್ರೀ ಕೊಠಾರಿ ದಂಪತಿಗಳ ಪುತ್ರ ರುನಾಲಕುಮಾರ ಹಾಗೂ ಈಶ್ವರಚಂದ-ಶ್ರೀಮತಿ ಸಾರಿಕಾ ಪರಮಾರ ದಂಪತಿಗಳ ಪುತ್ರ ವಿನಿತಕುಮಾರ ದೀಕ್ಷಾರ್ಥಿಗಳಾಗಿದ್ದು ರುನಾಲಕುಮಾರ ಅವರ ಸಹೋದರ ಚೇತನ್ ಈಗಾಗಲೇ ದೀಕ್ಷೆ ಪಡೆದು ಪೂಜ್ಯ ಮುನಿರಾಜ ಆನಂದಶೇಖರ ವಿಜಯಾಜಿ ಮಹಾರಾಜ ಎಂಬ ನಾಮಾಂಕಿತದೊಂದಿಗೆ ಹಾಗೂ ಇನ್ನೋರ್ವ ಸಹೋದರ ಪೂಜ್ಯ ಮುನಿರಾಜ ಕಲ್ಯಾಣಶೇಖರ ವಿಜಯಾಜೀ ಮಹಾರಾಜ ಎಂಬ ನಾಮಾಂಕಿತದೊಂದಿಗೆ ಜೈನ ಧರ್ಮ ಪ್ರಚಾರ-ಸಂಚಾರದಲ್ಲಿದ್ದಾರೆ. ಗದುಗಿನ ಮೊಮ್ಮಳಾದ ರುನಾಲಕುಮಾರ ಕೋಠಾರಿ 28-01-2024ರಂದು ಹುಬ್ಬಳ್ಳಿಯಲ್ಲಿ ಜೈನ್ ಗುರುಗಳಾದ ಆಚಾರ್ಯ ಅಜೀತಶೇಖರ ಸುರಿಶ್ವರಜೀ ಮಹಾರಾಜರ ಸಾನಿಧ್ಯದಲ್ಲಿ ದೀಕ್ಷೆ ಪಡೆಯಲಿದ್ದಾರೆ. ವಿನಿತ್‌ಕುಮಾರ ಪರಮಾರ 15-04-2024 ರಂದು ಕರಾಡ್‌ದಲ್ಲಿ ದೀಕ್ಷೆ ಪಡೆಯಲಿದ್ದಾರೆ.

# ಜ್ಞಾನದ ದೀಪ ಮನಸ್ಸಿನ ಕತ್ತಲೆಯನ್ನು ಕಳೆಯುತ್ತದೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೀಪ ಮನುಕುಲದ ಅಜ್ಞಾನ ಮತ್ತು ಅಂಧಕಾರವನ್ನು ಹೋಗಲಾಡಿಸಿ ಧರ್ಮದ ಬೆಳಕಿನೆಡೆಗೆ ಹಾಗೂ ಸನ್ಮಾರ್ಗ ತೋರಿಸುವ ದಿವ್ಯ ಶಕ್ತಿಯಾಗಿದೆ ಎಂದು ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಬಸವೇಶ ಮಹಾಂತಶೆಟ್ಟರ ಹೇಳಿದರು.

ಅವರು ಭಾನುವಾರ ಪಟ್ಟಣದ ಭಾವಸಾರ ಕ್ಷತ್ರಿಯ ಸಮಾಜದಿಂದ ಪಾಂಡುರಂಗ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ತಿಕೋತ್ಸವ ನೆರವೇರಿಸಿ ಮಾತನಾಡಿ, ನಾಡಿನ ಇತಿಹಾಸ, ಪರಂಪರೆಯಲ್ಲಿ ಪ್ರತಿಯೊಂದು ಹಬ್ಬಗಳಿಗೂ ವೈಜ್ಞಾನಿಕ ಹಿನ್ನೆಲೆ, ಮಹತ್ವವಿದೆ. ಅದರಂತೆ ದೀಪಾವಳಿ, ಕಾರ್ತಿಕೋತ್ಸವ ಹಬ್ಬದ ದಿನ ಬೆಳಗುವ ದೀಪವು ಕೇವಲ ಬ್ಯಾಹ್ಯ ಬೆಳಕಿನ ಶಕ್ತಿಯಾಗಿರದೇ ಆಂತರಾತ್ಮದ ಅಂಧಕಾರವನ್ನು ದೂರ ಮಾಡುವ ಜ್ಞಾನ ಜ್ಯೋತಿಯಾಗಿದೆ. ಈ ಹಬ್ಬಗಳು ಮನುಷ್ಯರಿಗೆ ಧರ್ಮ ಮಾರ್ಗದಲ್ಲಿ ಬದುಕುವ ಸನ್ಮಾರ್ಗವನ್ನು ತೋರುತ್ತವೆ. ಎಲ್ಲರೂ ಇದನ್ನರಿತು ನ್ಯಾಯ, ನೀತಿ, ಧರ್ಮ, ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು ಸಮಾಜಮುಖಿಯಾಗಿ ಬಾಳಬೇಕು ಎಂದರು.

ಡಾ.ಪ್ರಸನ್ನ ಕುಲಕರ್ಣಿ ಮಾತನಾಡಿ, ದೇವರ ಹೆಸರಿನಲ್ಲಿ ಧರ್ಮದ ದೀಪ ಹಚ್ಚುವುದು ಹಿಂದೂಗಳ ಸಂಪ್ರದಾಯ. ಬಾಹ್ಯ ದೀಪ ಸುತ್ತಲಿನ ಕತ್ತಲೆಯನ್ನು ಓಡಿಸಿದರೆ ಜ್ಞಾನದ ದೀಪ ಮನಸ್ಸಿನ ಕತ್ತಲೆಯನ್ನು ಕಳೆಯುತ್ತದೆ ಎಂಬ ಭಾವದಿಂದ ಒಳ್ಳೆಯ ಸಂಕಲ್ಪದೊಂದಿಗೆ ಕಾರ್ತಿಕ ದೀಪ ಬೆಳಗಿಸೋಣ ಎಂದರು.

ಈ ವೇಳೆ ಶಂಕ್ರಪ್ಪ ಮ್ಯಾಗೇರಿ, ಸ್ನೇಹಾ ಪ್ರಸನ್ನ ಕುಲಕರ್ಣಿ, ಆರ್. ಎನ್. ನವಲೆ, ಕಿರಣ ನವಲೆ, ಪುಂಡಲೀಕರಾವ್ ಮಾತಾಡೆ, ಸತೀಶ ಮಾಂಡ್ರೆ, ವೆಂಕಟೇಶ ಮಾತಾಡೆ, ಸತೀಶ ಬೋಮಲೆ, ಎಂ.ಸಿ. ಕಳ್ಳಿಮಠ, ಸಂತೋಷ ಸರ್ವದೆ, ಪ್ರಭು ಬೋಮಲೆ, ಪ್ರವೀಣ ಬೋಮಲೆ, ಅರುಣ ನವಲೆ, ಗಾಯತರಿ ಮಾಂಡ್ರೆ, ರಾಣಿ ನವಲೆ, ವಾಸು ಬೋಮಲೆ, ಅಕ್ಷತಾ ಬಸವಾ, ಪರಶುರಾಮ ಮೆಹರವಾಡೆ ಮುಂತಾದವರಿದ್ದರು.

# ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ




■ವಿಜಯಸಾಕ್ಷಿ ಸುದ್ದಿ, ಗದಗ

ಚುನಾವಣಾ ಪೂರ್ವದಲ್ಲಿ ರಾಜ್ಯದ ಸ್ಲಂ ನಿವಾಸಿಗಳಿಗೆ ಕಾಂಗ್ರೆಸ್ ಪಕ್ಷವು ನೀಡಿರುವ ಭರವಸೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿ ಹಾಗೂ ರಾಜ್ಯದ ಸ್ಲಂ ನಿವಾಸಿಗಳ ಜನಸಂಖ್ಯೆ ಆಧಾರದಲ್ಲಿ ಪ್ರತ್ಯೇಕ ಸಚಿವಾಲಯವನ್ನು ರಚನೆ ಮಾಡಿ ಕೊಳಚೆ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಪ್ರತ್ಯೇಕ ಸಚಿವರು ಮತ್ತು ಇಲಾಖೆಯನ್ನು ರಚಿಸಬೇಕೆಂದು ಸ್ಲಂ ಜನಾಂದೋಲನ-ಕರ್ನಾಟಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿಯಿಂದ ಗದಗ ನಗರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಸಮಿತಿಯ ಇಮ್ತಿಯಾಜ ಮಾನ್ವಿ ಮಾತನಾಡಿ, ರಾಜ್ಯ ಸರ್ಕಾರ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದು ಸ್ಲಂ ನಿವಾಸಿಗಳಿಗೆ ಹಾಗೂ ಬಡವರಿಗೆ ಉದ್ಯೋಗ ನೀಡುವ ಕಾಯ್ದೆಯನ್ನು ಜಾರಿಗೊಳಿಸಬೇಕು, ಕರ್ನಾಟಕ ಸಮಗ್ರ ಸ್ಲಂ ಅಭಿವೃದ್ಧಿ ಕಾಯಿದೆ-2018ರ ಕರಡು ಜಾರಿಯಾಗಬೇಕು, ರಾಜ್ಯದಲ್ಲಿ ವಸತಿ ಹಕ್ಕು ಕಾಯಿದೆ ಜಾರಿಗೊಳಿಸಬೇಕು, ರಾಜ್ಯದ ಸ್ಲಂ ನಿವಾಸಿಗಳ ಜನಸಂಖ್ಯೆ ಅನುಗುಣವಾಗಿ ಬಜೆಟ್‌ನಲ್ಲಿ ಪಾಲು ನಿಗದಿಗೊಳಿಸಬೇಕು, ಸರ್ಕಾರ ಅಥವಾ ಸ್ಲಂ ಜನರು ತಾವೇ ವಸತಿ ನಿರ್ಮಾಣ ಮಾಡುವ ಸಿ.ಎಂ ಹೌಸಿಂಗ್ ಯೋಜನೆಯನ್ನು ಜಾರಿಗೊಳಿಸಬೇಕು ಇವೇ ಮುಂತಾದ ಬೇಡಿಕೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಪ್ರಮುಖರಾದ ಅಶೋಕ ಕುಸಬಿ, ಪರವೀನಬಾನು ಹವಾಲ್ದಾರ, ಮಕ್ತುಮಸಾಬ ಮುಲ್ಲಾನವರ, ಮಂಜುನಾಥ ಶ್ರೀಗಿರಿ, ಶಿವಾನಂದ ಶಿಗ್ಲಿ, ಇಬ್ರಾಹಿಂ ಮುಲ್ಲಾ ಮುಂತಾದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ: ಎಸ್.ಭರತ್



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯಾದ 48 ಕರಾಸಾ ಪೇದೆಗಳ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಸೋಮವಾರ ಹುಬ್ಬಳ್ಳಿಯ ಪ್ರಾದೇಶಿಕ ತರಬೇತಿ ಕೇಂದ್ರದಲ್ಲಿ ನೆರವೇರಿತು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಭರತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಈ ನೇಮಕಾತಿಯು ನಿಮ್ಮ ಪಾಲಕರಿಂದ ಹಾಗೂ ನಿಮ್ಮ ಮನೆಯ ಯಜಮಾನರ ಶ್ರದ್ಧೆ ಮತ್ತು ತ್ಯಾಗಗಳ ಕೊಡುಗೆಯಾಗಿದೆ.

ನಿಮಗೆ ದೊರೆತ ಈ ಉದ್ಯೋಗವನ್ನು ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸಿ, ಸಂಸ್ಥೆಗೆ ಕೀರ್ತಿಯನ್ನು ತರುವುದಲ್ಲದೇ ತಮ್ಮ ಅವಲಂಬಿತರ ಯೋಗಕ್ಷೇಮವನ್ನು ನೋಡಿಕೊಳ್ಳುವುದೂ ಸಹ ತಮ್ಮೆಲ್ಲರ ನೈತಿಕ ಹೊಣೆಗಾರಿಕೆಯಾಗಿದೆಯೆಂದರು.

ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ ರಾಜೇಶ ಹುದ್ದಾರ ಮಾತನಾಡಿ, ಎಲ್ಲ ಕರಾಸಾ ಪೇದೆಗಳು ಸಂಸ್ಥೆಯ ಶಿಸ್ತು, ನಿಯಮಾವಳಿಗಳನ್ನು ರೂಢಿಸಿಕೊಂಡು ಜವಾಬ್ದಾರಿಯುತವಾಗಿ ಅತ್ಯುತ್ತಮವಾದ ಕಾರ್ಯ ನಿರ್ವಹಿಸುವಂತೆ ತಿಳಿಸಿದರು.

ವಿಜಯಶ್ರೀ ನರಗುಂದ, ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಪ್ರಾಂಶುಪಾಲರು, ಪ್ರಾ.ತ.ಕೇ ಹುಬ್ಬಳ್ಳಿ ಹಾಗೂ ಎಸ್. ವಿ.ಬದ್ದಿ ಹಾಜರಿದ್ದರು. ಸುನೀಲ ಪತ್ರಿ ಕಾರ್ಯಕ್ರಮ ನಿರೂಪಿಸಿದರು.

## ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ

# ನಶಿಸುತ್ತಿರುವ ಕಲೆಗಳನ್ನು ಪ್ರೋತ್ಸಾಹಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಶಾರದಾ ಮೆಮೋರಿಯಲ್ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗದಗ ಇವುಗಳ ಆಶ್ರಯದಲ್ಲಿ ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ನಗರದ ಮುನ್ಸಿಪಲ್ ಮೈದಾನದಲ್ಲಿ ಆಯೋಜಿಸಲಾಗಿತ್ತು.

ಹಿರಿಯ ಮುಖಂಡ, ಸಮಾಜ ಸೇವಕರಾದ ಮುರಗೇಶ ಶೆಟ್ಟರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಶ್ರೀ ಶಾರದಾಂಬಾ ಮೆಮೋರಿಯಲ್ ಟ್ರಸ್ಟ್‌ನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಭಾಗಿತ್ವದಲ್ಲಿ ಇಂತಹ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿ, ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವುದು, ನಶಿಸಿ ಹೋಗುತ್ತಿರುವ ಕಲೆಗಳನ್ನು ಪ್ರದರ್ಶಿಸಲು ಅವಕಾಶ ನೀಡಿರುವದು ಶ್ಲಾಘನೀಯ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗದಗ-ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ದಾಸರ ಮಾತನಾಡಿ, ಮಕ್ಕಳಿಗೆ ವಿದ್ಯಾಭ್ಯಾಸದೊಂದಿಗೆ ಇಂತಹ ಕಲೆಗಳನ್ನು ಕಲಿಯುವುದು ಅವಶ್ಯಕವಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನಗರಸಭೆಯ ಸದಸ್ಯ ಮುತ್ತಣ್ಣ ಮುಶೀಗೇರಿ ಮಾತನಾಡಿ, ಇಂದಿನ ಒತ್ತಡದ ಜೀವನದಲ್ಲಿ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವುದರಿಂದ ಮಾನಸಿಕ ನೆಮ್ಮದಿಯ ಜೊತೆಗೆ ಕಲಾವಿದರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು. ವೇದಿಕೆಯ ಮೇಲೆ ರೋಟರಿ ಕ್ಲಬ್ ಅಧ್ಯಕ್ಷ ವಿಜಯಕುಮಾರ ಹಿರೇಮಠ, ಸ್ನೇಹಾ ವಿಜಯಕುಮಾರ ಹಿರೇಮಠ, ಚಿತ್ರ ನಟ ದಕ್ಷ ಗರಗ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಗಾಯಕ, ಉಪನ್ಯಾಸಕ ಡಾ. ಮಹೇಶ ಕುಂದ್ರಾಳ ಹಿರೇಮಠರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರವೀಣ ಕರಲಿಂಗನವರ ನಿರ್ದೇಶನದಲ್ಲಿ 'ಜುಟ್ಟು ಬಾಬು' ನಾಟಕ ಪ್ರದರ್ಶನಗೊಂಡಿತು. ಪ್ರೀತಿ ಕಬಾಡರ ಸಂಗಡಿಗರಿಂದ ಸಮೂಹ ನೃತ್ಯ, ಅನುಷಾ ಬದನಾಳ ಸಂಗಡಿಗರು ಲಂಬಾಣಿ ನೃತ್ಯ ಪ್ರದರ್ಶಿಸಿದರು. ಸೋಮಶೇಖರ ಚಿಕ್ಕಮಠ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

# ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಇತ್ತೀಚೆಗೆ ಕಾನೂನು ಪದವಿಯನ್ನು ಪಡೆದು ಹೊರಬರುವ ವಕೀಲರಿಗೆ ವೃತ್ತಿ ಜೀವನ ಪ್ರಾರಂಭ ಮಾಡುವ ಮೊದಲು ನುರಿತ ವಕೀಲರ ಜೊತೆಗೆ ಅವರ ವೃತ್ತಿ ಜೀವನದಲ್ಲಿ ಪ್ರಾರಂಭಿಕ ಹಂತದಲ್ಲಿ ಸಹಾಯಧನ ನೀಡುವ ಸಲುವಾಗಿ ಪ್ರತಿ ವಕೀಲರಿಗೆ ಪ್ರತಿ ತಿಂಗಳು ರೂ.2,000/- ರಂತೆ 24 ತಿಂಗಳುಗಳ ಪ್ರೋತ್ಸಾಹ ಧನಕ್ಕಾಗಿ 2023-24ನೇ ಸಾಲಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ರಾಜ್ಯದ ಬಾರ್ ಕೌನ್ಸಿಲ್‌ನಲ್ಲಿ 1-6-2022 ರಿಂದ 31-5-2023 ವರೆಗಿನ ಅವಧಿಯಲ್ಲಿ ನೋಂದಾಯಿಸಿರಬೇಕು ಹಾಗೂ ವಾರ್ಷಿಕ ವರಮಾನ ರೂ.40,000/- ಮೀರಬಾರದು.

ತಾಲೂಕಾ ಬಾರ್ ಕೌನ್ಸಿಲ್‌ನಲ್ಲಿ ನೋಂದಣಿಯಾದವರು ಆಯಾ ತಾಲೂಕಾ ಹಿರಿಯ ನ್ಯಾಯಾಧೀಶರ ಮುಖಾಂತರ ಮತ್ತು ಜಿಲ್ಲಾ ಬಾರ್ ಕೌನ್ಸಿಲ್‌ನಲ್ಲಿ ನೋಂದಣಿಯಾದವರು ನೇರವಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಪದವೀಧರರ ಪ್ರೋತ್ಸಾಹ ಧನ ಆಯ್ಕೆ ಸಮಿತಿಗೆ ಜನವರಿ 12 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ, ಹುಬ್ಬಳ್ಳಿ ರಸ್ತೆ, ಗದಗ ದೂ.ಸಂ. 08372- 222077 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

# ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ರೋಣ ಪುರಸಭೆಯ ವ್ಯಾಪ್ತಿಯ ರೋಣ ಪಟ್ಟಣದಲ್ಲಿ ವಾಸಿಸುತ್ತಿರುವ ಪರಿಶಿಷ್ಟ-ಜಾತಿ, ಪರಿಶಿಷ್ಟ ಪಂಗಡದ ಹಾಗೂ ಇತರೆ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಸಹಾಯಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಅರ್ಜಿಯೊಂದಿಗೆ ಇತ್ತೀಚಿನ ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಬ್ಯಾಂಕ್ ಪಾಸ್‌ಬುಕ್, ಪಡಿತರ ಚೀಟಿ, ವ್ಯಾಸಂಗ ಪ್ರಮಾಣ ಪತ್ರ, (ಮೂಲ ಪ್ರತಿ) ಆಧಾರ್ ಕಾರ್ಡ್, ಫೋಟೋ, ಎಸ್.ಎಸ್. ಎಲ್.ಸಿ. & ಪಿಯುಸಿ ಅಂಕಪಟ್ಟಿ (ಝರಾಕ್ಸ್ ಪ್ರತಿ) ದಾಖಲಾತಿಗಳೊಂದಿಗೆ ದಿ. 30-12-2023 ರ ಒಳಗಾಗಿ ರೋಣ ಪುರಸಭೆಗೆ ಕಚೇರಿ ವೇಳೆಯಲ್ಲಿ ಮಾಹಿತಿಗಳನ್ನು ಸಲ್ಲಿಸತಕ್ಕದ್ದು ಹಾಗೂ ವಿಕಲಚೇತನ ಫಲಾನುಭವಿಗಳಿಗೆ ವೈದ್ಯಕೀಯ ಸಹಾಯಧನವಿದ್ದು ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಲು ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಪಡಿತರ ಚೀಟಿ, (ಅಂಗವಿಕಲರ ಗುರುತಿನ ಚೀಟಿ), ರಹವಾಸಿ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಶಸ್ತ್ರಚಿಕಿತ್ಸೆ ಪಡೆದ ಮೂಲ ವೈದ್ಯಕೀಯ ಪ್ರಮಾಣ ಪತ್ರಗಳೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರ ಅರ್ಜಿ ನಮೂನೆಗಳನ್ನು, ಸಂಬಂಧಿಸಿದ ದಾಖಲಾತಿಯೊಂದಿಗೆ ಕಚೇರಿಯ ಆವಕ- ಜಾವಕ ವಿಭಾಗದಲ್ಲಿ ಅರ್ಜಿಯೊಂದಿಗೆ ಸಲ್ಲಿಸಬಹುದಾಗಿದೆ ಎಂದು ರೋಣ ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka